# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಗುರುವಾರ, ಸೆಪ್ಟೆಂಬರ್ 08, 2022

ಸಂಪುಟ : 49 ಸಂಚಿಕೆ : 116 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಪಂಚಪೀಠಗಳು ಒಂದಾದರೆ ಭಕ್ತರಿಗೂ ಕ್ಷೇಮ

ದಾವಣಗೆರೆ, ಸೆ. 6- ಪಂಚಪೀಠಗಳು ಒಂದಾಗಬೇಕೆಂಬುದು ಭಕ್ತರ ಆಶಯವಾಗಿದೆ. ಒಂದಾದರೆ ಭಕ್ತರೂ ಕ್ಷೇಮವಾಗಿರುತ್ತಾರೆ. ಪಂಚ ಪೀಠಗಳಿಗೂ ಒಳಿತು. ಒಂದಾಗದಿದ್ದರೆ ಇಬ್ಬರಿಗೂ ತೊಂದರೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ, ಶಾಸಕರೂ ಆದ ಶಾಮನೂರು ಶಿವಶಂಕರಪ್ಪ ಹೇಳಿದರು.

ನಗರದ ದಾವಣಗೆರೆ-ಹರಿಹರ ಅರ್ಬನ್ ಸಹಕಾರಿ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಲಿಂ. ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ



ಸ್ವಾಮೀಜಿ ಅವರ 36ನೇ ವಾರ್ಷಿಕ ಪುಣ್ಯಾರಾಧನೆ ಮತ್ತು ಲಿಂ.ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರ 11ನೇ ವರ್ಷದ ಸ್ಮರಣೋತ್ಸವ ಹಾಗೂ ದ್ವಾದಶ ಪೀಠಾರೋಹಣ ಮಹೋತ್ಸವ, ಜನಜಾಗೃತಿ ಧರ್ಮ (2ನೇ ಪುಟಕ್ಕೆ)

## ಭ್ರಷ್ಟಾಚಾರ ಆರೋಪ ಮರು ವಿಚಾರಣೆಗೆ ಹೈಕೋರ್ಟ್ ಆದೇಶ

ಬೆಂಗಳೂರು, ಸೆ. 7 - ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕುಟುಂಬದ



ವಿರುದ್ಧದ ಭ್ರಷ್ಟಾಚಾರ ಆರೋಪ ಪ್ರಕರಣದ ಮರು ವಿಚಾರಣೆಗೆ ರಾಜ್ಯ ಹೈಕೋರ್ಟ್ ಆದೇಶಿಸಿದೆ.

2021ರ ಜುಲೈ 8ರಂದು ವಿಶೇಷ ನ್ಯಾಯಾಲಯವು ಬಿ.ಎಸ್. ಯಡಿಯೂರಪ್ಪ ವಿರುದ್ಧ ದಾಖಲಾಗಿದ್ದ ಖಾಸಗಿ ದೂರನ್ನು ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ಸಾಮಾಜಿಕ ಕಾರ್ಯಕರ್ತ ಟಿ.ಜೆ. ಅಬ್ರಹಾಂ ಸಲ್ಲಿಸಿದ್ದ ಅರ್ಜಿಯನ್ನು ಅಂಗೀಕರಿಸಿರುವ ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ (2ನೇ ಪುಟಕ್ಕೆ)

## ಕೆಎಎಸ್ ಪರೀಕ್ಷೆ : ನಗರದ ಸ್ಫೂರ್ತಿ ಸಕ್ರಿ ರಾಜ್ಯಕ್ಕೆ ಪ್ರಥಮ

ದಾವಣಗೆರೆ, ಸೆ. 7 - ನಗರದ ಡಾ. ಸ್ಫೂರ್ತಿ ಎನ್. ಸಕ್ರಿ



ಅವರು ಕೆಎಎಸ್ ಪರೀಕ್ಷೆಯಲ್ಲಿ ರಾಜ್ಯಕ್ಕೇ ಪ್ರಥಮ ಸ್ಥಾನದಲ್ಲಿ ತೇರ್ಗಡೆಯಾಗುವುದರ ಮೂಲಕ ವಾಣಿಜ್ಯ ತೆರಿಗೆ ಇಲಾಖೆಯ ಸಹಾಯಕ ಆಯುಕ್ತರಾಗಿ ಆಯ್ಕೆಯಾಗಿದ್ದಾರೆ.

ಸ್ಫೂರ್ತಿ ಅವರು ಬೆಂಗಳೂರಿನ (4ನೇ ಪುಟಕ್ಕೆ)










# ಪಂಚಪೀಠಗಳು ಒಂದಾದರೆ ಭಕ್ತರಿಗೂ, ಪೀಠಕ್ಕೂ ಕ್ಷೇಮ



(1ನೇ ಪುಟದಿಂದ) ಸಮ್ಮೇಳನದ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಒಂದಾಗುವ ಕುರಿತು ಕೆಲ ಜಗದ್ಗುರುಗಳ ಬಗ್ಗೆ ಮಾತನಾಡಿದ್ದೇನೆ. ಅರ್ಧ ಒಪ್ಪಿಗೆ ನೀಡಿದ್ದಾರೆ. ಐದೂ ಪೀಠಗಳ ಜಗದ್ಗುರುಗಳು ದಾವಣಗೆರೆಯಲ್ಲಿ ಸೇರಬೇಕು. ಅವರನ್ನು ಭವ್ಯವಾಗಿ ಮೆರವಣಿಗೆ ಮಾಡಬೇಕೆಂಬ ಆಸೆ ಎಲ್ಲಾ ಭಕ್ತರ ಮನದಲ್ಲಿದೆ. ಅದು ಶೀಘ್ರವೇ ಈಡೇರಲಿದೆ ಎಂದು ಭರವಸೆ ವ್ಯಕ್ತಪಡಿಸಿದರು.

ಕೆಲ ರಾಜಕಾರಣಿಗಳು ಚುನಾವಣೆಗಳು ಹತ್ತಿರ ಬಂದಾಗ ಮಾತ್ರ ಮಠಗಳಿಗೆ ಭೇಟಿ ನೀಡುತ್ತಾರೆ. ಆಗ ಸ್ವಾಮೀಜಿಗಳು ಯಾರು ಬಂದರೂ ನೀವೇ ಗೆಲ್ಲುತ್ತೀರಿ ಎಂದು ಆಶೀರ್ವಾದ ಮಾಡಿ ಕಳುಹಿಸುತ್ತಾರೆ. ಇಬ್ಬರೂ ಎಡ ಹಾಗೂ ಬಲ ಕಣ್ಣುಗಳು ಎಂದು ಹೇಳುತ್ತಾರೆ. ಚುನಾವಣೆ ಬಂದಾಗ ಸ್ವಾಮೀಜಿಗಳು ರಾಜಕಾರಣಿಗಳನ್ನು ತಮ್ಮ ಹತ್ತಿರ ಬಿಟ್ಟುಕೊಳ್ಳದೇ ಇರುವುದೇ ಒಳಿತು ಎಂದು ಎಸ್ಸೆಸ್ ಅಭಿಪ್ರಾಯಿಸಿದರು.

ಕಾರ್ಯಕ್ರಮಕ್ಕೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬರಬೇಕಿತ್ತು. ಸಚಿವ ಉಮೇಶ್ ಕತ್ತಿ ನಿಧನರಾಗಿದ್ದರಿಂದಾಗಿ ಅವರು ಬಂದಿಲ್ಲ. ಯಡಿಯೂರಪ್ಪ ಅವರು ಬರುವ ದಿನವೇ ನನ್ನನ್ನೂ ಕಾರ್ಯಕ್ರಮಕ್ಕೆ ಕರೆಯಲಾಗುತ್ತದೆ. ಅವರಿಗೂ-ನನಗೂ ಹೊಂದಾಣಿಕೆ ಇದೆ. ವೀರಶೈವ ಸಮಾಜದಲ್ಲಿ ಒಡಕು ಮೂಡಿಸುವ ಪ್ರಯತ್ನ ನಡೆದಾಗ ಅದನ್ನು ತಡೆಯುವಲ್ಲಿ ಅವರೂ ಸಹ ಪ್ರಯತ್ನಿಸಿದ್ದರು. ಆದ್ದರಿಂದಲೇ ಅವರು ಬರುವ ಸಂದರ್ಭದಲ್ಲಿ ನಾನೂ ಬರುತ್ತೇನೆ ಎಂದು ಹೇಳಿದರು.

## ನಗರದಲ್ಲಿ ಪಂಚ ಪೀಠಗಳ ಜಗದ್ಗುರುಗಳ ಭವ್ಯ ಮೆರವಣಿಗೆ ಮಾಡಬೇಕೆಂಬ ಆಸೆ ಭಕ್ತರ ಮನದಲ್ಲಿದೆ : ಎಸ್ಸೆಸ್

ಪಂಚಪೀಠಗಳು ಜನಜಾಗೃತಿ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಧರ್ಮದ ಬಗ್ಗೆ ಜಾಗೃತಿ ಮೂಡಿಸಿ ಸರಿ ದಾರಿಯಲ್ಲಿ ನಡೆಸುವ ಪ್ರಯತ್ನ ಮಾಡುತ್ತಿರುವುದು ಶ್ಲಾಘನೀಯ. ಇಂತಹ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಲಿ ಎಂದು ಆಶಿಸಿದರು.

ಲಿಂ.ವಾಗೀಶ ಶ್ರೀಗಳು ಹಾಗೂ ಲಿಂ.ಉಮಾಪತಿ ಶ್ರೀಗಳ ಕಾಲದಿಂದಲೂ ನಾನು ಪಂಚಪೀಠಗಳ ಸೇವೆ ಮಾಡುತ್ತಾ ಬಂದಿದ್ದೇನೆ. ಈಗಲೂ ಪಂಚ ಪೀಠಗಳ ಆಶೀರ್ವಾದದಿಂದ ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ ಎಂದು ಎಸ್ಸೆಸ್ ಹೇಳಿದರು.

ಮಾಜಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ವೀರಶೈವ ಪರಂಪರೆಗೆ ನಾಡಿನಲ್ಲಿ ವಿಶೇಷವಾದ ಗೌರವವಿದೆ. ನಮ್ಮ ರಾಜ್ಯ ಶೈಕ್ಷಣಿಕವಾಗಿ ಮುಂದೆ ಬರುವಲ್ಲಿ ಮಠ-ಮಾನ್ಯಗಳ ಪಾತ್ರ ಮಹತ್ವದ್ದಾಗಿದೆ ಎಂದರು.

ಮಠದ ಗುರುಗಳ ಸ್ಥಾನಕ್ಕೆ ಚ್ಯುತಿ ಬರುತ್ತಿರುವ ಘಟನೆಗಳು ಹೆಚ್ಚು ಸಂಭವಿಸುತ್ತಿರುವ ಈ ಸಂದರ್ಭದಲ್ಲಿ ಜಗದ್ಗುರುಗಳು, ಸಮಾಜದ ಹಿರಿಯರು ಸೇರಿ ಈ ಕುರಿತು ಚರ್ಚಿಸಬೇಕು. ಮಠಗಳಲ್ಲಿನ ಅವ್ಯವಸ್ಥೆ ಸರಿಪಡಿಸಲು ಕ್ರಮವಹಿಸುವ ಮೂಲಕ ಮಠಗಳು ಹಾಗೂ ಗುರುಗಳ ಬಗ್ಗೆ ಜನರಲ್ಲಿ ಗೌರವ, ಭಕ್ತಿ ಭಾವನೆ ಕಡಿಮೆ ಆಗದಂತೆ ಮಾಡಬೇಕು ಎಂದು ಹರೀಶ್ ಸಭೆಯಲ್ಲಿದ್ದ ಶ್ರೀಗಳು ಹಾಗೂ ಹಿರಿಯರಲ್ಲಿ ಮನವಿ ಮಾಡಿದರು.

ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿ ಸ್ವಾಮಿ ಮಾತನಾಡಿ, ಶಾಮನೂರು ಶಿವಶಂಕರಪ್ಪನವರು ಪಂಚ ಪೀಠಗಳು ಒಂದಾಗಲಿ ಎಂಬ ತಮ್ಮ ಅಂತರಂಗದ ಆಸೆಯನ್ನು ಪ್ರಸ್ತಾಪಿಸಿದ್ದಾರೆ. ಎಲ್ಲರ ಬಯಕೆಯೂ ಅದೇ ಆಗಿದೆ. ಪೀಠಗಳು ಒಂದಾದರೆ ಸಮಾಜಕ್ಕೆ ಒಂದು ಶಕ್ತಿ ಬಂದಂತಾಗುತ್ತದೆ ಎಂದರು.

ಶಿವಶಂಕರಪ್ಪನವರು ಮನಸ್ಸು ಮಾಡಿದರೆ ಪಂಚಪೀಠಗಳನ್ನು ಒಂದು ಮಾಡಲು ಸಾಧ್ಯವಿದೆ. ಸಮಾಜದ ಹರಕೆಯೂ ಇದೇ ಆಗಿದೆ. ಪಂಚ ಪೀಠಗಳೂ ಸಹ ನಾವೆಲ್ಲಾ ಒಂದು ಎಂದು ಸಂದೇಶ ನೀಡುವಂತಹ ಅನಿವಾರ್ಯ ಪರಿಸ್ಥಿತಿಯೂ ಬಂದಿದೆ ಎಂದು ಹೇಳಿದರು.

ವೀರಶೈವ ಬೇರೆ ಲಿಂಗಾಯತ ಬೇರೆ ಎಂದು ಒಡಕುಂಟು ಮಾಡಿದ್ದ ವೇಳೆ ಎರಡೂ ಒಂದೇ ಎಂದು ಹೇಳುವ ಮೂಲಕ ಸಮಾಜದ ಗಟ್ಟಿ ದನಿಯಾಗಿದ್ದರು. ಅದಕ್ಕೆ ಮಾಜಿ ಸಿಎಂ ಯಡಿಯೂರಪ್ಪ ಅವರೂ ಬೆಂಬಲಿಸಿದ್ದರೂ. ಈ ಎರಡೂ ಶಕ್ತಿಗಳ ಪರಿಣಾಮ ಎಂದರು ಸಮಾಜ ಒಗ್ಗಟ್ಟಾಗಿದೆ ಎಂದು ಹೇಳಿದರು.

ಹಿರಿಯ ಲೆಕ್ಕ ಪರಿಶೋಧಕ ಅಥಣಿ ಎಸ್. ವೀರಣ್ಣ ಮಾತನಾಡುತ್ತಾ, ಪಂಚ ಪೀಠಗಳನ್ನು ನೀವೇ ಮಾತ್ರ ಒಂದು ಮಾಡಲು ಸಾಧ್ಯ ಎಂದು ಶಿವಶಂಕರಪ್ಪ ಅವರಿಗೆ ಹೇಳಿದ್ದರಿಂದ ಅವರು ಒಪ್ಪಿಕೊಂಡಿದ್ದಾರೆ. ಈ ಕಾರ್ಯಕ್ಕೆ ಎನ್.ಎ. ಮುರುಗೇಶ್ ಅವರು ಗಟ್ಟಿಯಾಗಿ ನಿಲ್ಲಬೇಕಿದೆ ಎಂದರು.

ವೀರಶೈವ ಸಮಾಜ ಕವಲು ದಾರಿಯಲ್ಲಿದೆ. 109 ಒಳ ಪಂಗಡಗಳನ್ನು ಗುರುತಿಸಲಾಗಿದೆ. ಆದರೆ ಅವೆಲ್ಲಾ ಕಸುಬು ಸೂಚಿಸುವ ಪಂಗಡಗಳು ಮಾತ್ರ. ಆ ಒಳ ಪಂಗಡಗಳಲ್ಲಿ ಯಾವುದೇ ಭೇದವಿಲ್ಲ. ಎಲ್ಲಾ ಪಂಗಡಗಳು ಒಂದಾಗ ಬೇಕಿದೆ ಎಂದು ಹೇಳಿದರು.

ಕೊಟ್ಟೂರು ಜನಕೋಟಿ ಮಠದ ಡಾ.ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಈ ಕಾರ್ಯಕ್ರಮ ತ್ರಿವೇಣಿ ಸಂಗಮ ಎಂದು ಬಣ್ಣಿಸಿದರು.

ಉಜ್ಜಯಿನಿ ಮಹಾಪೀಠದ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಮಹಾಸ್ವಾಮೀಜಿ, ಶ್ರೀಶೈಲ ಮಹಾಪೀಠದ ಶ್ರೀ ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ, ಕಾಶೀ ಮಹಾಪೀಠದ ಜಗದ್ಗುರು ಡಾ.ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ಅವರು ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಹಗರಿಬೊಮ್ಮನಹಳ್ಳಿ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ರಟ್ಟಿಹಳ್ಳಿ ಕಬ್ಬಿಣಕಂತಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ರಾಣೇಬೆನ್ನೂರು ಮದ್ರಿಕೆಯ ಶ್ರೀ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ, ತಾವರಕೆರೆ ಶಿಲಾಮಠದ ಶ್ರೀ ಅಭಿನವ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಹರಪನಹಳ್ಳಿ ತೆಗ್ಗಿನಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ, ನಂದೀಪುರದ ಶ್ರೀ ಮಹೇಶ್ವರ ಸ್ವಾಮೀಜಿ, ಕೂಡಲ ಶ್ರೀ ಗುರುನಂಜೇಶ್ವರ ಶಿವಾಚಾರ್ಯ ಸ್ವಾಮೀಜಿ, ಕುರುವತ್ತಿ ಶ್ರೀ ಸಿದ್ಧ ನಂದೀಶ್ವರ ಶಿವಾಚಾರ್ಯ ಸ್ವಾಮೀಜಿ, ನಾಗವಂದ ಶ್ರೀ ಶಿವಯೋಗಿ ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಹಿರೇಹಡಗಲಿ ಶ್ರೀ ಅಭಿನವ ಹಾಲವೀರಪ್ಪಜ್ಜ ಪಂಡಿತಾರಾಧ್ಯ ಸ್ವಾಮೀಜಿ, ಜವಳಿ ವರ್ತಕ ಬಿ.ಸಿ. ಶಿವಕುಮಾರ್, ಬಿ.ನಾಗೇಶಪ್ಪ, ಸಿದ್ದಯ್ಯ ಸ್ವಾಮಿ ಹಿರೇಮಠ ಇತರರು ಉಪಸ್ಥಿತರಿದ್ದರು.

ಉಳುವಯ್ಯ ಸ್ವಾಗತಿಸಿದರು. ಸೌಭಾಗ್ಯ ಎಸ್. ಹಿರೇಮಠ ನಿರೂಪಿಸಿದರು.

## ನೋಂದಾಯಿತ ಮಾನ್ಯತೆ ರಹಿತ ಪಕ್ಷಗಳ ವಿರುದ್ಧ ಐಟಿ ದಾಳಿ

ನವದೆಹಲಿ, ಸೆ. 7 – ನೋಂದಾಯಿತ ಮಾನ್ಯತೆ ಪಡೆಯದ ರಾಜಕೀಯ ಪಕ್ಷಗಳು ತೆರಿಗೆ ವಂಚನೆ ಮಾಡುತ್ತಿವೆ ಎಂಬ ಆರೋಪಗಳ ಹಿನ್ನೆಲೆಯಲ್ಲಿ, ಆದಾಯ ತೆರಿಗೆ ಇಲಾಖೆಯು ಬುಧವಾರ ದೇಶಾದ್ಯಂತದ ಇಂತಹ ರಾಜಕೀಯ ಪಕ್ಷಗಳ ಮೇಲೆ ದಾಳಿ ನಡೆಸಿದೆ. ಗುಜರಾತ್, ದೆಹಲಿ, ಉತ್ತರ ಪ್ರದೇಶ, ಮಹಾರಾಷ್ಟ್ರ, ಮಧ್ಯ ಪ್ರದೇಶ, ಛತ್ತೀಸ್‌ಘಡ, ಹರಿಯಾಣ ಸೇರಿದಂತೆ ಹಲವು ರಾಜ್ಯಗಳಲ್ಲಿನ 110 ತಾಣಗಳ ಮೇಲೆ ದಾಳಿ ನಡೆಸಲಾಗಿದೆ. ಈ ರಾಜಕೀಯ ಪಕ್ಷಗಳು, ಅವುಗಳ ಪ್ರವರ್ತಕರು ಹಾಗೂ ಸಂಬಂಧಿಸಿದ ಸಂಸ್ಥೆಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಚುನಾವಣಾ ಆಯೋಗ ಇತ್ತೀಚೆಗೆ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಕನಿಷ್ಠ 198 ನೋಂದಾಯಿತ ಮಾನ್ಯತೆ ಪಡೆಯದ ಪಕ್ಷಗಳು ಅಸ್ತಿತ್ವದಲ್ಲಿ ಇಲ್ಲ ಎಂಬುದು ಪತ್ತೆಯಾಗಿತ್ತು. ನಂತರ ಅವುಗಳ ಹೆಸರುಗಳನ್ನು ರಾಜಕೀಯ ಪಕ್ಷಗಳ ಪಟ್ಟಿಯಿಂದ ತೆಗೆದು ಹಾಕಲಾಗಿತ್ತು.

ಚುನಾವಣಾ ನಿಯಮಗಳನ್ನು ಉಲ್ಲಂಘಿಸಿದ ಕಾರಣಕ್ಕಾಗಿ ಈ ರೀತಿಯ 2,100 ಪಕ್ಷಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿ ಚುನಾವಣಾ ಆಯೋಗ ತಿಳಿಸಿತ್ತು. ಈ ಪಕ್ಷಗಳಲ್ಲಿ ಕೆಲವು ಗಂಭೀರ ಹಣಕಾಸು ಅವ್ಯವಹಾರ ನಡೆಸಿವೆ ಎಂದೂ ಆಯೋಗ ಹೇಳಿತ್ತು.

## ಪ್ರವೇಶ ಪರೀಕ್ಷೆಗಳ ವಿಲೀನ ಇಲ್ಲ

ಕೋಟ (ರಾಜಸ್ಥಾನ), ಸೆ. 7 – ಇಂಜಿನಿಯರಿಂಗ್ ಪ್ರವೇಶಕ್ಕೆ ನಡೆಸಲಾಗುವ ಜೆಇಇ, ವೈದ್ಯಕೀಯ ಪ್ರವೇಶಕ್ಕೆ ನಡೆಸಲಾಗುವ ನೀಟ್ ಪರೀಕ್ಷೆಗಳನ್ನು ವಿಶ್ವವಿದ್ಯಾನಿಲಯಗಳ ಪ್ರವೇಶಕ್ಕೆ ನಡೆಸಲಾಗುವ ಸಿ.ಯು.ಇ.ಟಿ.ಯಲ್ಲಿ ವಿಲೀನ ಮಾಡುವ ಯೋಜನೆ ಇಲ್ಲ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದ್ದಾರೆ.

ಜೆಇಇ ಹಾಗೂ ನೀಟ್ ಪರೀಕ್ಷೆಗಳನ್ನು ಸಿ.ಯು.ಇ.ಟಿ.ಯಲ್ಲಿ ವಿಲೀನಗೊಳಿಸಲಾಗುವುದು ಎಂದು ವಿಶ್ವವಿದ್ಯಾನಿಲಯಗಳ ಧನ ಸಹಾಯ ಆಯೋಗದ ಅಧ್ಯಕ್ಷ ಜಗದೀಶ್ ಕುಮಾರ್ ಕಳೆದ ತಿಂಗಳು ತಿಳಿಸಿದ್ದಾರೆ.

ಈ ಪರೀಕ್ಷೆಗಳ ವಿಲೀನ ಪ್ರಸ್ತಾವನೆಯ ಹಂತದಲ್ಲಿದೆ. ಈ ಬಗ್ಗೆ ತಾತ್ವಿಕ ನಿರ್ಧಾರ ತೆಗೆದುಕೊಂಡಿಲ್ಲ ಎಂದು ಪ್ರಧಾನ್ ತಿಳಿಸಿದ್ದಾರೆ. ಕನಿಷ್ಠ ಎರಡು ವರ್ಷಗಳವರೆಗೆ ಈ ಪರೀಕ್ಷೆಗಳನ್ನು ವಿಲೀನಗೊಳಿಸುವುದಿಲ್ಲ. ವಿದ್ಯಾರ್ಥಿಗಳು ಈ ಬಗ್ಗೆ ಹೆದರಬೇಕಿಲ್ಲ ಎಂದು ಪ್ರಧಾನ್ ತಿಳಿಸಿದ್ದಾರೆ.

ಇತ್ತೀಚೆಗೆ ನಡೆಸಲಾದ ಸಿ.ಯು.ಇ.ಟಿ. ಪರೀಕ್ಷೆಗಳಲ್ಲಿ ಸಾಕಷ್ಟು ತಾಂತ್ರಿಕ ಲೋಪಗಳು ಕಂಡು ಬಂದಿದ್ದವು. ಹಲವು ಬಾರಿ ಪರೀಕ್ಷೆಗಳನ್ನು ಮುಂದೂಡಲಾಗಿತ್ತು. ಈ ಹಿನ್ನೆಲೆಯಲ್ಲಿ ಪರೀಕ್ಷೆಗಳ ವಿಲೀನದ ಬಗ್ಗೆ ವಿದ್ಯಾರ್ಥಿಗಳಲ್ಲಿ ಕಳವಳ ಉಂಟಾಗಿತ್ತು.

## ಹರಿಹರ : ಮಾತೆ ಮೇರಿಗೆ ದಿವ್ಯ ಪೂಜೆ



ಹರಿಹರ, ಸೆ 7 - ನಗರದ ಆರೋಗ್ಯ ಮಾತೆಯ ಮಹೋತ್ಸವದ ಮುನ್ನದಿನದ ದಿವ್ಯಪೂಜಾ ವಿಧಿಯನ್ನು ಚಿಕ್ಕಮಗಳೂರಿನ ಧರ್ಮಾಧ್ಯಕ್ಷರಾದ ಡಾ.ಟಿ.ಅಂತೋಣಿಸ್ವಾಮಿ ನಡೆಸಿಕೊಟ್ಟರು. ಪೂಜಾ ವಿಧಿಯಲ್ಲಿ ಭಕ್ತಾದಿಗಳಿಗೆ ಆಶೀರ್ವಾದ ನೀಡಿ, ಮಾತೆ ಮರಿಯಳ ಜೀವನದ ಆದರ್ಶಗಳನ್ನು ನಮ್ಮ ಬಾಳಿನಲ್ಲಿ ಅಳವಡಿಸಿಕೊಂಡು ಪವಿತ್ರ ಜೀವನ ನಡೆಸಬೇಕು ಎಂದು ಕರೆ ನೀಡಿದರು.ಇವರೊಂದಿಗೆ ಶಿವಮೊಗ್ಗ ಧರ್ಮಾಧ್ಯಕ್ಷ ಡಾ.ಫ್ರಾನ್ಸಿಸ್ ಸೆರೋವೊ ಪೂಜಾ ವಿಧಿಯ ನೇತೃತ್ವ ವಹಿಸಿದ್ದರು. ಪುಣ್ಯಕ್ಷೇತ್ರದ ಪ್ರಧಾನ ಗುರುಗಳಾದ ಫಾದರ್ ಡಾ.ಅಂತೋಣಿ ಪೀಟರ್ ಹಾಗೂ ಅನೇಕ ಗುರುಗಳು ಹಾಜರಿದ್ದರು.

## ಮರು ವಿಚಾರಣೆಗೆ ಹೈಕೋರ್ಟ್ ಆದೇಶ

(1ನೇ ಪುಟದಿಂದ) ಅವರು ಈ ಆದೇಶ ಹೊರಡಿಸಿದ್ದಾರೆ. ಯಡಿಯೂರಪ್ಪ, ಅವರ ಪುತ್ರ ಬಿ.ವೈ.ವಿಜಯೇಂದ್ರ ಹಾಗೂ ಅವರ ಕುಟುಂಬದ ಕೆಲ ಸದಸ್ಯರು, ಸಚಿವ ಎಸ್.ಟಿ.ಸೋಮಶೇಖರ್ ಸೇರಿದಂತೆ 9 ಜನರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಯೋಜನೆಯೊಂದಕ್ಕೆ 12.5 ಕೋಟಿ ರೂ. ಲಂಚ ಪಡೆದಿದ್ದಾರೆ ಎಂದು ಆರೋಪಿಸಲಾಗಿತ್ತು.

## ಹರಪನಹಳ್ಳಿಯಲ್ಲಿ 24 ರಂದು ಬೃಹತ್ ಉದ್ಯೋಗ ಮೇಳ

ಹರಪನಹಳ್ಳಿ, ಸೆ.7- ಶಂಕರನಹಳ್ಳಿ ಭೀಮಪ್ಪ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಹಾಗೂ ಅಕ್ಷರ ಫೌಂಡೇಶನ್ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸಹಕಾರದೊಂದಿಗೆ ಮತ್ತು ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ಇದೇ ದಿನಾಂಕ 24 ರಂದು ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ ಎಂದು ಕೆಪಿಸಿಸಿ ಓಬಿಸಿ ಘಟಕದ ಉಪಾಧ್ಯಕ್ಷ ಶಂಕರನಹಳ್ಳಿ ಉಮೇಶ್ ಬಾಬು ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಂಜುಂಡಪ್ಪ ವರದಿ ಅನ್ವಯ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಹರಪನಹಳ್ಳಿ ಕೂಡ ಒಂದಾಗಿದ್ದು, ತಾಲ್ಲೂಕಿನಲ್ಲಿ ಸಾಕಷ್ಟು ನಿರುದ್ಯೋಗ ಸಮಸ್ಯೆ ಇರುವ ಹಿನ್ನೆಲೆಯಲ್ಲಿ ಈ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ ಎಂದರು.



ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ ಶಿವಯೋಗಿ ಮಾತನಾಡಿ, ವರ್ಷಕ್ಕೆ 2ಕೋಟಿ ಉದ್ಯೋಗ ಸೃಷ್ಟಿಸುತ್ತೇವೆಂದು ಸುಳ್ಳು ಭರವಸೆ ನೀಡಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಇದುವರೆಗೂ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ಆಗುತ್ತಿಲ್ಲ ಎಂದು ಕಿಡಿ ಕಾರಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಕವಿತಾ ರೆಡ್ಡಿ ಮಾತನಾಡಿ, ದೇಶದಲ್ಲಿ ನಿರುದ್ಯೋಗ ಸಮಸ್ಯೆ ತಾಂಡವಾಡುತ್ತಿದ್ದು, ಇದರ ಬಗ್ಗೆ ಗಮನ ಹರಿಸದೇ ಕೇಂದ್ರ ಬಿಜೆಪಿ ಸರ್ಕಾರ ಜನಸಾಮಾನ್ಯರ ಮೇಲೆ ಅಗತ್ಯ ವಸ್ತುಗಳ ಮತ್ತು ಜಿಎಸ್‌ಟಿ ದರ ಏರಿಸುವುದೇ ಇವರ ಸಾಧನೆಯಾಗಿದೆ. ಶೇ 8.1ರಷ್ಟು ನಿರುದ್ಯೋಗ ಸಮಸ್ಯೆ ಸೃಷ್ಟಿಯಾಗಿದೆ. ಅಲ್ಲದೇ ತಾತ್ಕಾಲಿಕವಾಗಿ ಅಗ್ನಿಪಥ್ ಮೂಲಕ ಯುವಕರನ್ನು ನೇಮಕ ಮಾಡಿಕೊಂಡು ನಂತರ ಅವರನ್ನು ಸಂಪೂರ್ಣ ನಿರುದ್ಯೋಗಗಳನ್ನು ಮಾಡುವ ಹುನ್ನಾರ ನಡೆದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ ಮಾತನಾಡಿದರು.

ಅಕ್ಷರ ಫೌಂಡೇಷನ್ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಕುಮಾರ್ ಉಪ್ಪಾರ್ ಮಾತನಾಡಿ, ಉದ್ಯೋಗ ಮೇಳದಲ್ಲಿ 80ಕ್ಕೂ ಹೆಚ್ಚು ಕಂಪನಿಗಳು ಪಾಲ್ಗೊಳ್ಳಲಿವೆ. ಸುಮಾರು 5000ಕ್ಕೂ ಹೆಚ್ಚು ಯುವಕರಿಗೆ ಉದ್ಯೋಗ ನೀಡಲಿದ್ದು, ಈ ಮೇಳದಲ್ಲಿ ಆಯ್ಕೆಯಾದವರಿಗೆ ಸ್ಥಳದಲ್ಲೇ ಆದೇಶ ಪತ್ರ ನೀಡಲಾಗುವುದು. ವಿವರಕ್ಕೆ ರಮೇಶ್ (7619197742), ಮಂಜು (8722021267), ಶಶಿ (9900239953) ಅವರನ್ನು ಸಂಪರ್ಕಿಸಬಹುದು.

ಈ ಸಂದರ್ಭದಲ್ಲಿ ಕೆಪಿಸಿಸಿ ಕಾರ್ಮಿಕ ವಿಭಾಗದ ಉಪಾಧ್ಯಕ್ಷ ತಿಮ್ಮಪ್ಪ, ಶಂಕರನಹಳ್ಳಿ ಹನುಮಂತಪ್ಪ, ರಾಜು, ಅಲಮರಸೀಕೆರೆ ರಮೇಶ್, ಮಂಜುನಾಥ, ಸೇರಿದಂತೆ ಇತರರು ಇದ್ದರು.

## ನಗರದಲ್ಲಿ ಕಾಶಿ ಜಗದ್ಗುರುಗಳ ಸಂಗೀತಯುಕ್ತ ಇಷ್ಟಲಿಂಗ ಪೂಜೆ



ಶ್ರೀಶೈಲ ಜಗದ್ಗುರು ಲಿಂ. ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಲಿಂ. ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರ ಪುಣ್ಯಾರಾಧನೆ ಅಂಗವಾಗಿ ಇಂದು ಬೆಳಿಗ್ಗೆ 8 ಗಂಟೆಗೆ ದಾವಣಗೆರೆ-ಹರಿಹರ ಅರ್ಬನ್ ಸಹಕಾರಿ ಬ್ಯಾಂಕ್ ಸಮುದಾಯ ಭವನದಲ್ಲಿ ಕಾಶೀ ಜಗದ್ಗುರು ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಯವರಿಂದ ಸಂಗೀತಯುಕ್ತ ಇಷ್ಟಲಿಂಗ ಮಹಾಪೂಜೆ, ಆಶೀರ್ವಚನ, ಪ್ರಸಾದ ವಿನಿಯೋಗ ನಡೆಯಲಿದೆ.

## ಬೆಳ್ಳೂಡಿ ಮಠದಲ್ಲಿಂದು ಸಭೆ

ಕಾಗಿನೆಲೆ ಕನಕ ಗುರುಪೀಠದ ಬೆಳ್ಳೂಡಿ ಶಾಖಾಮಠದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ಹರಿಹರ ತಾಲ್ಲೂಕಿನ ಕುರುಬ ಸಮಾಜದ ಜಾಗೃತಿ ಸಭೆಯನ್ನು ಕರೆಯಲಾಗಿದೆ ಎಂದು ತಾಲ್ಲೂಕು ಕುರುಬ ಸಮಾಜದ ಕಾರ್ಯದರ್ಶಿ ಕೆ.ಪಿ.ಗಂಗಾಧರ್ ತಿಳಿಸಿದ್ದಾರೆ.


## ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀ ಜಿ. ಬೋರಯ್ಯನವರು**

ಪ್ರಾಂಶುಪಾಲರು, ಶ್ರೀ ಮೃತ್ಯುಂಜಯ ಸ್ಕೂಲ್ ಆಫ್ ನರ್ಸಿಂಗ್, ದಾವಣಗೆರೆ


ಇವರು ದಿನಾಂಕ 07-09-2022ರ ಬುಧವಾರ ನಿಧನರಾಗಿದ್ದು ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಮೃತರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

✦ ಶ್ರೀ ಬಿ.ಸಿ. ರಾಜಣ್ಣ, ಅಧ್ಯಕ್ಷರು, ಶ್ರೀ ಮೃತ್ಯುಂಜಯ ಸ್ಕೂಲ್ ಆಫ್ ನರ್ಸಿಂಗ್ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾ ಮೆಡಿಕಲ್ ಸೈನ್ಸಸ್ ಹಾಗೂ ಸಿಬ್ಬಂದಿ ವರ್ಗ

✦ ಸೋನಾ ಮೊಬೈಲ್ಸ್ ✦ ನವರಂಗ್ ಮುದ್ರಣ,

✦ ನವರಂಗ್ ಸರ್ವೀಸ್ ಸ್ಟೇಷನ್, ದಾವಣಗೆರೆ.


### ಹಾಲವರ್ತಿ ಕೃಷ್ಣಪ್ಪ ನಿಧನ



ಆವರಗೆರೆ ವಾಸಿ ಚಂದ್ರೋದಯ ಮಿಲ್ ಕಾರ್ಮಿಕರಾದ ಕಾಮ್ರೆಡ್ ಹಾಲವರ್ತಿ ಕೃಷ್ಣಪ್ಪ (76) ಇವರು ದಿನಾಂಕ 7.9.2022ರ ಬುಧವಾರ ರಾತ್ರಿ 8.10 ಕ್ಕೆ ನಿಧನರಾದರು. ಪತ್ನಿ, ಮೂವರು ಪುತ್ರರು, ಮಕ್ಕಳು, ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 8.9.2022ರ ಗುರುವಾರ ಮಧ್ಯಾಹ್ನ 1 ಗಂಟೆಗೆ ದಾವಣಗೆರೆ ಸಮೀಪದ ಆವರಗೆರೆ ರುದ್ರಭೂಮಿಯಲ್ಲಿ ನೆರವೇರಲಿದೆ.

ರಕ್ತದಾನ, ಶ್ರೇಷ್ಠದಾನ

## ಕೆರೆಗಳ ಸಂರಕ್ಷಣೆ ಅಗತ್ಯ: ಹೆಬ್ಬಾಳು ಮಹಾಂತ ಶ್ರೀ

ಮಾಯಕೊಂಡ, ಸೆ.7- ಕೆರೆಗಳ ಸಂರಕ್ಷಣೆಗೆ ರೈತರು, ಸರ್ಕಾರ ಮುಂದಾಗಬೇಕು ಎಂದು ಮುರುಘಾ ಮಠದ ಪ್ರಭಾರ ಪೀಠಾಧ್ಯಕ್ಷರಾದ ಹೆಬ್ಬಾಳಿನ ಶ್ರೀ ಮಹಾಂತ ರುದ್ರ ಸ್ವಾಮೀಜಿ ನುಡಿದರು.

ಸಮೀಪದ ಹೆಬ್ಬಾಳಿನ ಕೆರೆಗೆ ಬಾಗಿನ ಅರ್ಪಿಸಿ ಮಾತನಾಡಿದ ಶ್ರೀಗಳು, ಈ ವರ್ಷ ಬಹುತೇಕ ಕೆರೆಗಳು ತುಂಬಿದ್ದು, ಅಂತರ್ಜಲ ಪ್ರಮಾಣ ಸಾಕಷ್ಟು ಹೆಚ್ಚಿದೆ. ಕೆರೆಗಳು ರೈತರ ಜೀವನಾಡಿಗಳು. ಕಾಲಕಾಲಕ್ಕೆ ಹೂಳು ತೆಗೆಸಿ, ರೈತರು, ಸರ್ಕಾರ, ಕೆರೆಗಳ ಸಂರಕ್ಷಣೆಗೆ ಮುಂದಾಗಬೇಕು.


ರೈತರು ದುರಾಸೆಯಿಂದ ಕೆರೆಗಳ ಒತ್ತುವರಿ ಮಾಡಬಾರದು. ತ್ಯಾಜ್ಯಗಳನ್ನು ತಂದು ಕೆರೆಗೆ ಹಾಕಬಾರದು. ರೈತರ ಉಳಿವಿಗಾಗಿಯೇ ಹಿಂದಿನವರು ಕೆರೆ ಕಟ್ಟಿಸಿದ್ದಾರೆ. ಕೆರೆ ನಿರ್ಮಾಣ ಅತ್ಯಂತ ಪುಣ್ಯದ ಕಾರ್ಯವಾಗಿದೆ. ಕೆರೆಗಳು ಪ್ರಕೃತಿ ಸಂಪತ್ತು ಹೆಚ್ಚಿಸುತ್ತವೆ ಎಂದರು.

ಅಥಣಿ ಗಚ್ಚಿನ ಮಠದ ಶ್ರೀ ಶಿವ ಬಸವ ಸ್ವಾಮೀಜಿ, ಶಿರಸಿಯ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿ, ಕಂದಾಯ ನಿರೀಕ್ಷಕ ಚಂದ್ರಪ್ಪ, ಗ್ರಾ.ಪಂ. ಸದಸ್ಯರಾದ ಮಹಾರುದ್ರಯ್ಯ, ಓಹಿಲೇಶ್, ಮುಖಂಡರಾದ ನರೇಂದ್ರ ಬಾಬು, ರುದ್ರಮುನಿ, ರುದ್ರಪ್ಪ, ಮಹೇಂದ್ರ, ದೊರೆಸ್ವಾಮಿ, ಆನೆಪ್ಪ, ಬಸವರಾಜಪ್ಪ, ನೀಲಕಂಠಪ್ಪ ಮತ್ತು ಗ್ರಾಮಸ್ಥರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ಹೆಬ್ಬಾಳು ಕೆರೆಗೆ ಬಾಗಿನ ಅರ್ಪಣೆ

### ಜಿ.ಜಗದೀಶ್ ನಿಧನ



ದಾವಣಗೆರೆ ಸಿಟಿ ಎಸ್.ಎಸ್.ಲೇಔಟ್ 'ಎ' ಬ್ಲಾಕ್, 1ನೇ ಮೇನ್, 2ನೇ ಕ್ರಾಸ್ ವಾಸಿ

**ಜಿ.ಜಗದೀಶ್ (63)**

ಇವರು ದಿನಾಂಕ 7.9.2022ರಂದು ಬುಧವಾರ 5.20ಕ್ಕೆ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 7.9.2022ರಂದು ಬುಧವಾರ ಸಂಜೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿದುಃಖತಪ್ತರು : **ಪತ್ನಿ : ಜಿ.ಸುದಾ, ಮಕ್ಕಳು, ಹೊಸಕಟ್ಟೆ ವಂಶಸ್ಥರು, ದಯಾನಂದ ಟ್ರೇಡರ್ಸ್, ಎಪಿಎಂಸಿ ಯಾರ್ಡ್, ದಾವಣಗೆರೆ.**

## ಬಿಜೆಪಿ ಸರ್ಕಾರಕ್ಕೆ ಮೂರು ವರ್ಷ

### ಜನೋತ್ಸವ ಸಮಾವೇಶ ಮುಂದಕ್ಕೆ

ಬೆಂಗಳೂರು, ಸೆ. 7 - ಬಿಜೆಪಿ ಸರ್ಕಾರಕ್ಕೆ ಮೂರು ವರ್ಷಗಳು ತುಂಬಿರುವ ಹಿನ್ನೆಲೆಯಲ್ಲಿ ನಾಳೆ ದೊಡ್ಡಬಳ್ಳಾಪುರದಲ್ಲಿ ಹಮ್ಮಿಕೊಂಡಿದ್ದ ಜನೋತ್ಸವ ಸಮಾವೇಶವನ್ನು ಮತ್ತೆ ಮುಂದೂಡಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಒಂದು ವರ್ಷ ಆಡಳಿತ ಪೂರೈಸಿದ ಹಿನ್ನೆಲೆಯಲ್ಲಿ ಜುಲೈ 28 ರಂದು ಜನೋತ್ಸವ ಹಮ್ಮಿಕೊಳ್ಳಲಾಗಿತ್ತು.

ಆದರೆ ಕಾರಣಾಂತರಗಳಿಂದ ಮುಂದೂಡಲಾಗಿದ್ದ ಸಮಾವೇಶವನ್ನು ಸೆಪ್ಟೆಂಬರ್ 8 ರಂದು ನಡೆಸಲು ತೀರ್ಮಾನಿಸಿ, ದೊಡ್ಡ ಪ್ರಮಾಣದಲ್ಲಿ ಕಾರ್ಯಾಕ್ರಮ ಯಶಸ್ವಿಗೊಳಿಸಲು ಸಚಿವರ ದಂಡೇ ಮುಂದಾಗಿತ್ತು.

ಆದರೆ, ಸಚಿವ ಉಮೇಶ್ ಕತ್ತಿ ಅವರ ಅಕಾಲಿಕ ಮರಣದಿಂದ ನಾಳಿನ ಕಾರ್ಯಕ್ರಮವನ್ನು ಸೆ.11ಕ್ಕೆ ಮುಂದೂಡಲಾಗಿದೆ.

ಈ ಮೊದಲು ಕತ್ತಿ ಅವರ ಅಂತ್ಯಕ್ರಿಯೆ ಇಂದೇ ಮುಗಿಯುವುದರಿಂದ ನಾಳೆ ಸಮಾವೇಶ ನಡೆಸಲು ಸಚಿವರುಗಳು ತೀರ್ಮಾನಿಸಿದ್ದರು. ಆದರೆ ಉತ್ತರ ಕರ್ನಾಟಕ ಭಾಗಕ್ಕೆ ಸೇರಿದ ಶಾಸಕರು, ಮುಖಂಡರುಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿ, ಬಿಜೆಪಿ ನಾಯಕರನ್ನು ತರಾಟೆಗೆ ತೆಗೆದುಕೊಂಡರು.

ಉತ್ತರ ಕರ್ನಾಟಕ ಭಾಗದ ಜನಪ್ರತಿನಿಧಿಗಳಿಂದ ಆಕ್ರೋಶ ಬುಗಿಲೇಳುತ್ತಿದ್ದಂತೆ ಎಚ್ಚೆತ್ತುಕೊಂಡ ಮುಖ್ಯಮಂತ್ರಿಯವರು, ನಾಲ್ಕು ದಿನಗಳ ಮಟ್ಟಿಗೆ ಸಮಾವೇಶ ಮುಂದೂಡುವ ತೀರ್ಮಾನ ತೆಗೆದುಕೊಂಡರು.

## ಸರಿಗಮಪ ಖ್ಯಾತಿಯ ಹನುಮಂತು ಅವರಿಂದ ಇಂದು ಗಾಯನ

ನಗರದ ಹೈಸ್ಕೂಲ್ ಮೈದಾನದ ಹಿಂದೂ ಮಹಾ ಗಣಪತಿ ವತಿಯಿಂದ ಇಂದು ಸಂಜೆ 7 ಗಂಟೆಗೆ ಸರಿಗಮಪ ಖ್ಯಾತಿಯ ಹನುಮಂತು ಅವರಿಂದ ಗಾಯನ ಹಾಗೂ ಡಿಕೆಡಿ ಆರ್ಕೆಸ್ಟ್ರಾ ವತಿಯಿಂದ ಆರ್ಕೆಸ್ಟ್ರಾ ಕಾರ್ಯಕ್ರಮ ನಡೆಯಲಿದೆ ಎಂದು ಸಮಿತಿಯ ಅಧ್ಯಕ್ಷ ಜೊಳ್ಳಿ ಗುರು ಹಾಗೂ ಸಂಘದ ಎಂ.ವಿ. ಕಮಲ್ ಗಿರೀಶ್ ತಿಳಿಸಿದ್ದಾರೆ.

## ಚುನಾವಣೆ ಘೋಷಣೆಗೆ ಮೊದಲೇ ಮತದಾರರ ಓಲೈಕೆ

ಬೆಂಗಳೂರು, ಸೆ. 7 - ರಾಜ್ಯ ವಿಧಾನಸಭೆಗೆ ಚುನಾವಣೆ ಘೋಷಣೆಯಾಗುವ ಮುನ್ನವೇ ಮತದಾರರನ್ನು ಓಲೈಸಲು ರಾಜಕಾರಣಿಗಳು ಶುರು ಮಾಡಿದ್ದಾರೆ.

ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಖಾತರಿಯಾಗಿರುವ ಆಕಾಂಕ್ಷಿಗಳು ತಮ್ಮ ಕ್ಷೇತ್ರದ ಜನರ ಮನವೊಲಿಕೆಗೆ ನಾನಾ ತಂತ್ರ ಆರಂಭಿಸಿದ್ದಾರೆ. ರಾಜ್ಯದಲ್ಲಿ ಹಿಂದೆಂದೂ ಕಂಡರಿಯದಂತಹ ಭಾರೀ ಮಳೆ, ಅತಿವೃಷ್ಟಿ, ಪ್ರವಾಹ ಉಂಟಾಗಿ ಜನರು ತತ್ತರಿಸಿರುವ ಸಂದರ್ಭದಲ್ಲಿಯೇ ಪ್ರವಾಸ ಭಾಗ್ಯ ಕಲ್ಪಿಸುತ್ತಿದ್ದಾರೆ.

ತಮಿಳುನಾಡಿನ ಓಂ ಶಕ್ತಿ, ಧರ್ಮಸ್ಥಳ, ಮುರುಡೇಶ್ವರ ದೇವಾಲಯಗಳು ಜಲಪಾತ ಸೇರಿದಂತೆ ರಾಜ್ಯ ಹಾಗೂ ಹೊರ ರಾಜ್ಯದ ಯಾತ್ರಾ ಸ್ಥಳಗಳಿಗೆ ಪ್ರವಾಸಕ್ಕೆ ನೂರಾರು ಬಸ್‌ಗಳಲ್ಲಿ ಕಳುಹಿಸಿ ಅವರ ಮನಗೆಲ್ಲುವ ಪ್ರಯತ್ನ ಮಾಡುತ್ತಿದ್ದಾರೆ.

ಅವಧಿಗೆ ಮುನ್ನವೇ ರಾಜ್ಯ ವಿಧಾನಸಭಾ ಚುನಾವಣೆ ನಡೆಯಲಿದೆ ಎಂಬ ಗುಂಗಿನಲ್ಲಿರುವ ಶಾಸಕರು, ಸ್ಪರ್ಧಾಕಾಂಕ್ಷಿಗಳು ಸಿದ್ಧತೆ ಆರಂಭಿಸಿದ್ದಾರೆ. ಪ್ರವಾಸವಷ್ಟೇ ಅಲ್ಲ, ಹಬ್ಬದ ಸಂದರ್ಭದಲ್ಲಿ ಕುಕ್ಕರ್, ತವಾ, ಆಹಾರ ಧಾನ್ಯ ಸೇರಿದಂತೆ ನಾನಾ ರೀತಿಯ ಉಡುಗೊರೆಗಳನ್ನು ನೀಡತೊಡಗಿದ್ದಾರೆ.

ಜತೆಗೆ ಕ್ಷೇತ್ರದ ಜನರ ಸಮಸ್ಯೆ ಆಲಿಸಿ ಪರಿಹಾರ ಕಲ್ಪಿಸುವ ಸೋಗು ಹಾಕಿ ಪಾದಯಾತ್ರೆ ಮೂಲಕ ಕ್ಷೇತ್ರ ದರ್ಶನ ಮಾಡುತ್ತಿದ್ದಾರೆ. ಅಲ್ಲದೆ, ಹೆಚ್ಚು ಸಮಯವನ್ನು ತಮ್ಮ ಕ್ಷೇತ್ರದ ಕಾರ್ಯ-ಕಾರ್ಯಕ್ರಮಗಳಿಗೆ ಕೊಡುತ್ತಿದ್ದಾರೆ.

ಈ ಕಾರ್ಯದಲ್ಲಿ ಬಹುತೇಕ, ಶಾಸಕರು ತೊಡಗಿದ್ದಾರೆ. ಸ್ಪರ್ಧೆಗಿಳಿಯುವ ಆಕಾಂಕ್ಷಿಗಳು ಪೈಪೋಟಿಗಿಳಿದು ಜನಮನ ಗೆಲ್ಲುವ ಪ್ರಯತ್ನ ಮಾಡತೊಡಗಿದ್ದಾರೆ. ಒಂದೊಂದು ಕ್ಷೇತ್ರದಲ್ಲಿ ಮೂರೂ ರಾಜಕೀಯ ಪಕ್ಷದವರು ಇಂತಹ ಕಾರ್ಯಗಳನ್ನು ಕೈಗೊಂಡಿದ್ದಾರೆ.

ಸರ್ಕಾರ ಹಾಗೂ ಬಿಜೆಪಿಯ ಇತ್ತೀಚಿನ ನಡವಳಿಕೆಗಳು ಗುಜರಾತ್ ಚುನಾವಣೆ ಸಂದರ್ಭದಲ್ಲೇ ರಾಜ್ಯದಲ್ಲೂ ಚುನಾವಣೆ ಎದುರಾಗಬಹುದು ಎಂಬ ಸಂದೇಹಕ್ಕೆ ಎಡೆಮಾಡಿಕೊಟ್ಟಿವೆ. ಈ ಹಿನ್ನೆಲೆಯಲ್ಲಿ ತಮ್ಮದೇ ಆದ ತಂತ್ರ-ಪ್ರತಿತಂತ್ರಗಳ ಮೂಲಕ ಚುನಾವಣೆ ಸಿದ್ಧತೆಯಲ್ಲಿ ತೊಡಗಿದ್ದಾರೆ. ಒಟ್ಟಿನಲ್ಲಿ ಚುನಾವಣಾ ಮುಹೂರ್ತ ನಿಗದಿಯಾಗದಿದ್ದರೂ ಆಕಾಂಕ್ಷಿಗಳ ಎದೆಬಡಿತ ಈಗಿನಿಂದಲೇ ಜೋರಾಗತೊಡಗಿದೆ.

# ತ್ರಿ ಎಸ್ ಸೂತ್ರ ಅಳವಡಿಸಿಕೊಳ್ಳಲು ಕಾರ್ಯಕರ್ತರಿಗೆ ಕರೆ

## ಬಿಜೆಪಿ ಎಸ್.ಟಿ. ಮೋರ್ಚಾ ರಾಜ್ಯ ಪ್ರಶಿಕ್ಷಣ ವರ್ಗದ ಸಮಾರೋಪದಲ್ಲಿ ಮಹೇಶ್ ತೆಂಗಿನಕಾಯಿ




ದಾವಣಗೆರೆ, ಸೆ. 7- ಜನರ ಮಧ್ಯೆ ಇದ್ದುಕೊಂಡು ಸಂಘಟನೆ ಮಾಡಿ ಜನಸೇವೆ ಮಾಡುವ ಮೂಲಕ ಮನೆ, ಮನ ಮುಟ್ಟಿದಾಗ ಪಕ್ಷ ಬಲಿಷ್ಠಗೊಳಿಸುವ ಜೊತೆಗೆ ರಾಜಕೀಯವಾಗಿ ಏಳಿಗೆ ಕಾಣಲು ಸಾಧ್ಯ. ಇದಕ್ಕೆ ತ್ರಿ ಎಸ್ ಸೂತ್ರ ಅಳವಡಿಸಿಕೊಳ್ಳಿ ಎಂದು ಪಕ್ಷದ ಕಾರ್ಯಕರ್ತರಿಗೆ ಬಿಜೆಪಿ ಎಸ್.ಟಿ. ಮೋರ್ಚಾ ರಾಜ್ಯ ಕಾರ್ಯದರ್ಶಿ ಮಹೇಶ್ ಟೆಂಗಿನಕಾಯಿ ಕರೆನೀಡಿದರು.

ನಗರದ ಪೂಜಾ ಇಂಟರ್‌ನ್ಯಾಷನಲ್ ಹೋಟೆಲ್‌ನಲ್ಲಿ ನಿನ್ನೆ ಏರ್ಪಾಡಾಗಿದ್ದ ಬಿಜೆಪಿ ಎಸ್.ಟಿ. ಮೋರ್ಚಾ ರಾಜ್ಯ ಪ್ರಶಿಕ್ಷಣ ವರ್ಗ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಕೇವಲ ಫ್ಲೆಕ್ಸ್ ಹಾಕಿಕೊಂಡರೆ ಮತ್ತು ನಾಯಕರ ಹಿಂದೆ ಸುತ್ತುವರೆದರೆ ದಿಢೀರ್ ನಾಯಕರಾಗುವುದಿಲ್ಲ. ಶಿಸ್ತಿನಿಂದ ಪಕ್ಷ ಹೇಳಿದ ಕೆಲಸವನ್ನು ಚಾಚು ತಪ್ಪದೇ ಮಾಡುತ್ತಾ ಸಂಯಮವನ್ನು ಕಾಪಾಡಿಕೊಳ್ಳಬೇಕು. ಪಕ್ಷವನ್ನು ಸಂಘಟನಾತ್ಮಕವಾಗಿ ಕಟ್ಟಬೇಕಿದೆ. ಈ ಶಿಸ್ತು, ಸಂಯಮ, ಸಂಘಟನೆಯ ತ್ರಿ ಎಸ್ ಸೂತ್ರ ಪಾಲಿಸಿದಾಗ ಬಿಜೆಪಿ ಬಲಿಷ್ಠಗೊಳ್ಳುವ ಜೊತೆಗೆ ಪಕ್ಷದಲ್ಲಿ ನಿಮಗೂ ಮನ್ನಣೆ ಸಿಕ್ಕು ಉನ್ನತ ಸ್ಥಾನ ಪಡೆಯಬಹುದು ಎಂದು ತಿಳಿಸಿದರು.

ತ್ರಿ-ಕೆ (ಕಾರ್ಯ, ಕಾರ್ಯಕರ್ತ ಮತ್ತು ಕಾರ್ಯಕ್ರಮ) ಸೂತ್ರ ಮುಖ್ಯ. ಪಕ್ಷದ ಧ್ಯೇಯೋದ್ದೇಶವನ್ನು ಸ್ಪಷ್ಟತೆಯಿಂದ ಕಾರ್ಯಕರ್ತ ಆದವರು ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವ ಮೂಲಕ ಸಮಾಜವನ್ನು ಪರಿವರ್ತನೆ ಮಾಡಬೇಕಿದೆ. ಪಕ್ಷದಲ್ಲಿ ನಾಯಕರಾಗಬೇಕಾದರೆ ಜನಸೇವೆ ಮಾಡಬೇಕು. ಜನರೇ ನಿಮ್ಮನ್ನು ನಾಯಕರನ್ನಾಗಿಸುತ್ತಾರೆ ಎಂದು ಹೇಳಿದರು.

ರಾಜ್ಯದಲ್ಲಿ ಎಸ್.ಟಿ. ಸಮುದಾಯ 60-70 ಲಕ್ಷ ಮತದಾರರನ್ನು ಹೊಂದಿದೆ. ಕೆಳೆ ಹಂತದಲ್ಲಿರುವ ಈ ಸಮುದಾಯದ ಜನರನ್ನು ಮೇಲಕ್ಕೆ ತರುವ ಕೆಲಸವನ್ನು ಜವಾಬ್ದಾರಿಯಿಂದ ಮಾಡಬೇಕು. ಆಗ ಪಕ್ಷಕ್ಕೆ ಮತ್ತಷ್ಟು ಬಲ ಬರಲಿದೆ ಎಂದರು.

ಚುನಾವಣೆಯಲ್ಲಿ ಎಸ್.ಟಿ. ಸಮಾಜದ ಜನರನ್ನು ಮುಟ್ಟುವ ಕೆಲಸವಾಗಬೇಕು. ಅವರ ಮನ-ಮನೆಗಳನ್ನು ತಲುಪಿದ್ದಲ್ಲಿ ನಾವು ಮಾಡುವ ಕೆಲಸದಲ್ಲಿ ಯಶಸ್ಸು ಕಾಣಬಹುದಾಗಿದೆ ಅನ್ನುವುದನ್ನು ಎಸ್.ಟಿ. ಮೋರ್ಚಾದ ಪದಾಧಿಕಾರಿಗಳು ಮನಗಾಣಬೇಕಿದೆ ಎಂದರು.

ಬಿಜೆಪಿ ರಾಜ್ಯ ಎಸ್.ಟಿ. ಮೋರ್ಚಾ ರಾಜ್ಯಾಧ್ಯಕ್ಷ ತಿಪ್ಪರಾಜು ಹವಾಲ್ದಾರ್ ಅಧ್ಯಕ್ಷತೆ ವಹಿಸಿ, ರಾಜ್ಯದಲ್ಲಿ ವಾಲ್ಮೀಕಿ ಸಮಾಜ ಬಲಿಷ್ಟವಾಗಿದೆ. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಮೊದಲಿಗೆ ವಾಲ್ಮೀಕಿ ಜಯಂತಿಯನ್ನು ಆಚರಣೆಗೆ ತಂದರು. ಈಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪರಿಶಿಷ್ಟ ವರ್ಗದ ಸಚಿವಾಲಯವನ್ನು ತಂದು, ಶ್ರೀರಾಮುಲು ಅವರನ್ನು ಮಂತ್ರಿಯನ್ನಾಗಿ ಮಾಡಿದ್ದಾರೆ. ಇದು ಬಿಜೆಪಿ ಎಸ್.ಟಿ. ಸಮುದಾಯದವರನ್ನು ಕೈ ಬಿಡುವುದಿಲ್ಲ ಅನ್ನುವುದಕ್ಕೆ ಸಾಕ್ಷಿಯಾಗಿದೆ ಎಂದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ ಮಾತನಾಡಿ, ಬಿಜೆಪಿ ಪರವಾಗಿ ನಮ್ಮ ಸಮಾಜ ವಿದ್ದು, ಎಂದೆಂದಿಗೂ ಬೆಂಬಲವಾಗಿ ನಿಲ್ಲಲಿದೆ ಎಂದರು.

ಎಸ್ಟಿ ಮೋರ್ಚಾ ರಾಷ್ಟ್ರೀಯ ಉಪಾಧ್ಯಕ್ಷ ಸತ್ಯನಾರಾಯಣ ರೆಡ್ಡಿ, ಎಸ್.ಟಿ. ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಮಂಜುನಾಥ ಓಲೇಕಾರ, ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಎಸ್ಟಿ ಮೋರ್ಚಾ ಜಿಲ್ಲಾಧ್ಯಕ್ಷ ಕೃಷ್ಣಕುಮಾರ್, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಬಳ್ಳಾರಿಯಲ್ಲಿ ಎಸ್.ಟಿ. ಮೋರ್ಚಾ ಸಮಾವೇಶ ಬಿಜೆಪಿಯಲ್ಲಿ ಸಂಘಟನಾತ್ಮಕ ಚಟುವಟಿಕೆಗಳನ್ನು ಮಾಡುವ ಉದ್ದೇಶದಿಂದ ಪಕ್ಷದ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲು ಅವರು ಕಾರ್ಯಕ್ರಮಗಳ ವೇಳಾ ಪಟ್ಟಿಯನ್ನು ಸಿದ್ದ ಮಾಡಿದ್ದಾರೆ. ಅದರಂತೆ ಬಳ್ಳಾರಿಯಲ್ಲಿ ಪರಿಶಿಷ್ಟ ವರ್ಗದ ಸಮಾವೇಶವನ್ನು ಸೆಪ್ಟೆಂಬರ್ 26 ಅಥವಾ 27ಕ್ಕೆ ಮಾಡುವ ಉದ್ದೇಶವಿದ್ದು, ದಿನಾಂಕದಲ್ಲಿ ಸ್ವಲ್ಪ ಬದಲಾವಣೆ ಸಾಧ್ಯತೆ ಇದೆ. ಈ ಸಮಾವೇಶ ಕರ್ನಾಟಕಕ್ಕೆ ಒಂದು ದೊಡ್ಡ ಸಂದೇಶ ಕೊಡಲಿದೆ ಎಂದು ಮಹೇಶ್ ಟೆಂಗಿನಕಾಯಿ ಹೇಳಿದರು.

### ವಾಲ್ಮೀಕಿ ಸಮಾಜಕ್ಕೆ 7.5 ಮೀಸಲಾತಿ : ವಿಶ್ವಾಸ

**ವಾಲ್ಮೀಕಿ ನಾಯಕ ಸಮಾಜಕ್ಕೆ 7.5 ಮೀಸಲಾತಿಗಾಗಿ ವಾಲ್ಮೀಕಿ ಸ್ವಾಮೀಜಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹೋರಾಟ ಮಾಡುತ್ತಿದ್ದಾರೆ. ನಮ್ಮ ಪಕ್ಷ ಮತ್ತು ಸರ್ಕಾರ ಎಸ್.ಟಿ. ಸಮಾಜಕ್ಕೆ 7.5 ಮೀಸಲಾತಿ ಕೊಡುವ ವಿಶ್ವಾಸವಿದೆ. ಈ ವಿಚಾರವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಮಾತನಾಡಿದ್ದೇವೆ. ಖಂಡಿತವಾಗಿ ಮೀಸಲಾತಿ ಕೊಡುವುದಾಗಿ ಭರವಸೆ ನೀಡಿದ್ದಾರೆ.**

**- ತಿಪ್ಪರಾಜು ಹವಾಲ್ದಾರ್**
**ಬಿಜೆಪಿ ರಾಜ್ಯ ಎಸ್.ಟಿ. ಮೋರ್ಚಾ ರಾಜ್ಯಾಧ್ಯಕ್ಷ.**

## ನಗರದಲ್ಲಿ ಇಂದಿನಿಂದ ರೈತರಿಗೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ಪಶು ಆಸ್ಪತ್ರೆ ಆವರಣದಲ್ಲಿರುವ ರೈತರಿಗೆ ಪಶುಸಂಗೋಪನಾ ಚಟುವಟಿಕೆ ಕುರಿತು ತರಬೇತಿ ಶಿಬಿರ ನಡೆಯಲಿದೆ.

ಇಂದಿನಿಂದ ಇದೇ ದಿನಾಂಕ 13 ರವರೆಗೆ ಕುರಿ ಮತ್ತು ಮೇಕೆ ಸಾಕಾಣಿಕೆ ಬಗ್ಗೆ ತರಬೇತಿ, ಆಧುನಿಕ ಹೈನುಗಾರಿಕೆ ಬಗ್ಗೆ ತರಬೇತಿ ಕಾರ್ಯಕ್ರಮದಲ್ಲಿ ತಲಾ 25 ಜನರಿಗೆ ತರಬೇತಿ ನೀಡುವ ಗುರಿ ಹೊಂದಲಾಗಿದೆ.

ವಿವರಕ್ಕ ಸಂಪರ್ಕಿಸುವ ದೂರವಾಣಿ 08192-233787.

## ಭವಿಷ್ಯ ನಿಧಿ ಅದಾಲತ್

ದಾವಣಗೆರೆ, ಸೆ.7- ಭವಿಷ್ಯ ನಿಧಿ ಅದಾಲತ್ ಅನ್ನು ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರರು ಇದೇ ದಿನಾಂಕ 12 ರಂದು ಭವಿಷ್ಯ ನಿಧಿ ಕಚೇರಿ ಮಲ್ಲಿಗೇನಹಳ್ಳಿ ಅಟಲ್ ಬಿಹಾರಿ ವಾಜಪೇಯಿ ಲೇಔಟ್ ಶಿವಮೊಗ್ಗ ಇಪಿಎಫ್ ಮತ್ತು ಇಪಿಎಸ್ ಸದಸ್ಯರಿಗಾಗಿ ಅದಾಲತ್ ಕಾರ್ಯಕ್ರಮವನ್ನು ನಡೆಸಲಿದ್ದಾರೆ

ಉದ್ಯೋಗದಾತರು ಮತ್ತು ಟ್ರೇಡ್ ಯೂನಿಯನ್ ಸದಸ್ಯರು ಹಾಗೂ ಪಿಂಚಣಿದಾರರು ಬೆಳಗ್ಗೆ 11 ರಿಂದ 1 ರವರೆಗೆ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.

ಪಿ.ಎಫ್ ಹಾಗೂ ಟ್ರೇಡ್ ಯೂನಿಯನ್ ಉದ್ಯೋಗದಾತರು ಕುಂದು ಕೊರತೆ ವಿವರದ ಬಗ್ಗೆ ಮುಂಚಿತವಾಗಿ ಇ-ಮೇಲ್ ಹಾಗೂ ಐಡಿ ಯೊಂದಿಗೆ ತಮ್ಮ ಕೋಡ್ ನಂಬರ್, ಹೆಸರು, ಮೊಬೈಲ್ ಸಂಖ್ಯೆ, ವಿವರವನ್ನು ಒದಗಿಸಲು ನಾಳೆ ದಿನಾಂಕ 8 ರೊಳಗೆ ro.shivamogga@epfindia.gov.in ಗೆ ಕಳುಹಿಸಬಹುದು ಎಂದು ಪ್ರಾದೇಶಿಕ ಭವಿಷ್ಯನಿಧಿ ಆಯುಕ್ತರು ತಿಳಿಸಿದ್ದಾರೆ.

## ಜಿಲ್ಲೆಯಲ್ಲಿ ಇಂದು ಮದ್ಯ ಮಾರಾಟ ನಿಷೇಧ

ಗಣೇಶ ವಿಸರ್ಜನೆ ಮೆರವಣಿಗೆ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಮದ್ಯ ಮಾರಾಟ ಮತ್ತು ಸರಬರಾಜನ್ನು ಇಂದು ಬೆಳಿಗ್ಗೆ 6 ರಿಂದ ಮಧ್ಯರಾತ್ರಿ 12 ಗಂಟೆವರೆಗೆ ನಿಷೇಧಗೊಳಿಸಲು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಆದೇಶಿಸಿದ್ದಾರೆ.

# ಅಧ್ಯಾತ್ಮ, ಸಂಸ್ಕೃತಿಯಲ್ಲಿ ಭಾರತ ವಿಶ್ವಕ್ಕೇ ಮಾದರಿ



**ಜಗಳೂರು**

ಜಗಳೂರು, ಸೆ. 7- ಭಾರತ ಅಧ್ಯಾತ್ಮಿಕತೆ, ಸಂಸ್ಕೃತಿಯಲ್ಲಿ ವಿಶ್ವಕ್ಕೇ ಮಾದರಿಯಾಗಿದೆ ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಭಾರತಿ ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ಓಂಕಾರೇಶ್ವರ ಬಡಾವಣೆಯ ಈಶ್ವರೀಯ ವಿದ್ಯಾಲಯದಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಕಳೆದ ವಾರ ಹಮ್ಮಿಕೊಂಡಿದ್ದ ರಕ್ಷಾಬಂಧನ ಹಾಗೂ ಬೈಕ್ ರ್‍ಯಾಲಿ ಕಾರ್ಯಕ್ರದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭಾರತ ದೇಶ ಶ್ರೀಮಂತ ರಾಷ್ಟ್ರ ಎಂಬುದು ವಿಜಯನಗರ ಸಾಮ್ರಾಜ್ಯದ ವೈಭವ, ವ್ಯಾಪಾರಕ್ಕೆಂದು ಬಂದು 3 ಶತಕಗಳ ಕಾಲ ಆಳ್ವಿಕೆ ನಡೆಸಿದ ಬ್ರಿಟೀಷರು ದೋಚಿದ ಸಂಪತ್ತನ್ನು ಸ್ಮರಿಸಬೇಕಿದೆ.

ಭವಿಷ್ಯದಲ್ಲಿ ಪುನರ್ ನಿರ್ಮಾಣ ಮತ್ತು ಸಮೃದ್ಧ ಭಾರತದ ಕನಸು ನನಸಾಗಿಸಲು ಸಂಕಲ್ಪಕ್ಕೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ದೇಶವ್ಯಾಪಿ ಈಶ್ವರೀಯ ವಿದ್ಯಾಲಯದ ಪ್ರತಿ ಶಾಖೆಯಿಂದ ಎಲ್ಲಾ ವರ್ಗದವರಿಗೆ ಅಧ್ಯಾತ್ಮಿಕತೆಯ ಮೂಲಕ ಶಾಂತಿಯ ಚಿತ್ತ ಮೂಡಿಸುತ್ತಿದೆ. ಅಲ್ಲದೆ ಮಾಧ್ಯಮಗಳು ವಿಷಯಗಳ ಕಣಜವಾಗಿವೆ. ಆದರೆ ಮನುಷ್ಯ ಮನುಷ್ಯನ ಮಧ್ಯೆ ಚಿಂತನೆ, ಸಾಮರಸ್ಯದ ಕೊರತೆಯಿದೆ ಎಂದು ವಿಷಾದಿಸಿದರು.

ಪಿಎಸ್ಐ ಬಸವರಾಜ್ ಮಾತನಾಡಿ, ಮಾಧ್ಯಮಗಳ ಪ್ರಭಾವದಿಂದ ಮನುಷ್ಯ ಶಾಂತಿ, ನೆಮ್ಮದಿ ಅಧ್ಯಾತ್ಮಿಕತೆಯಿಂದ ದೂರವಾಗಿದ್ದಾನೆ. ಈ ನಿಟ್ಟಿನಲ್ಲಿ ಈಶ್ವರೀಯ ವಿದ್ಯಾಲಯದಂತಹ ಸಂಸ್ಥೆಗಳತ್ತ ಯುವ ಸಮೂಹ ಮುಖ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಕಸಾಪ ಅಧ್ಯಕ್ಷರಾದ ಸುಜಾತ, ಪತ್ರಕರ್ತರ ಸಂಘದ ತಾಲ್ಲೂಕು ಅಧ್ಯಕ್ಷ ಜಿ.ಎಸ್. ಚಿದಾನಂದ, ಕದಳಿ ವೇದಿಕೆ ಅಧ್ಯಕ್ಷರಾದ ಗೌರಮ್ಮ, ಅಲ್ ಫಾತೀಮಾ ಸಂಸ್ಥೆಯ ಶಾಹಿನಾ ಬೇಗಂ, ಧರ್ಮಸ್ಥಳ ಗ್ರಾಮಾಭಿವೃದ್ದಿ ಸಂಸ್ಥೆ ಯೋಜನಾಧಿಕಾರಿ ಮಂಜುನಾಥ್, ಕರವೇ ಸಂಘಟನೆಯ ರೇಖಾ, ವಾಣಿ, ಚಂಪಾವತಿ, ಮಹಮ್ಮದ್ ಷರೀಫ್ ಉಪಸ್ಥಿತರಿದ್ದರು.



### ಶಿವಕುಮಾರ ಸ್ವಾಮೀಜಿ ವೃತ್ತಕ್ಕೆ ಸಿದ್ದಲಿಂಗ ಶ್ರೀ ಭೇಟಿ

ದಾವಣಗೆರೆ, ಸೆ.7- ಕೊಂಡಜ್ಜಿ ರಸ್ತೆಯ ಹೊಸ ಆರ್‌ಟಿಓ ಕಚೇರಿ ಹತ್ತಿರದ ವೃತ್ತಕ್ಕೆ ರಾಜ್ಯ ಸರ್ಕಾರದಿಂದ ಸಿದ್ದಗಂಗಾ ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತ ಎಂಬ ಹೆಸರು ನಾಮಕರಣ ಮಾಡಿದ ನಿಮಿತ್ತ ತುಮಕೂರು ಸಿದ್ದಗಂಗಾ ಮಠಾಧೀಶರಾದ ಶ್ರೀ ಸಿದ್ದಲಿಂಗ ಮಹಾಸ್ವಾಮಿಜಿ ಕಳೆದ ವಾರ ವೃತ್ತಕ್ಕೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಸಿದ್ದಗಂಗಾ ಶ್ರೀ ಡಾ. ಶಿವಕುಮಾರ ಸ್ವಾಮೀಜಿ ಸರ್ಕಲ್ ಯುವಕರ ಸಂಘದ ಸಂಸ್ಥಾಪಕ ಶಂಕರ್ ಎ. ಶಿರೇಕರ ಪವಾರ್, ಪ್ರಶಾಂತ್, ವೀರೇಶ್, ವಿನೋಬ ನಗರದ ಸಿದ್ದಗಂಗಾ ಗೆಳೆಯರ ಬಳಗದ ಗೌರವ ಅಧ್ಯಕ್ಷ ಶಿವಪ್ರಸಾದ ಕರ್ಜಗಿ, ಸದಸ್ಯರಾದ ಅನಿಲ್ ವಾಲಿ, ರಾಜಣ್ಣ ವಾಲಿ ಸೇರಿದಂತೆ ಇತರರು ಇದ್ದರು.

# ಸಕಲ ಗೌರವಗಳೊಂದಿಗೆ ಉಮೇಶ್ ಕತ್ತಿ ಅಂತ್ಯಕ್ರಿಯೆ



**ಮೂರು ದಿನ ಶೋಕಾಚರಣೆ ಪ್ರಕಟಿಸಿದ ರಾಜ್ಯ ಸರ್ಕಾರ**

ಬೆಂಗಳೂರು, ಸೆ. 7 – ನಿನ್ನೆ ಹೃದಯಾಘಾತದಿಂದ ನಿಧನರಾದ ಸಚಿವ ಉಮೇಶ್ ಕತ್ತಿ ಅವರ ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಗೌರವಗಳೊಂದಿಗೆ ಬುಧವಾರ ನೆರವೇರಿಸಲಾಯಿತು. ರಾಜ್ಯ ಸರ್ಕಾರವು ಸೆಪ್ಟೆಂಬರ್ 9ರವರೆಗೆ ರಾಜ್ಯಾದ್ಯಂತ ಶೋಕಾಚರಣೆ ಪ್ರಕಟಿಸಿದೆ.

61 ವರ್ಷದ ಸಚಿವ ಕತ್ತಿ ಅವರ ಅಂತ್ಯಕ್ರಿಯೆಯನ್ನು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನಲ್ಲಿರುವ ಅವರ ತವರೂರಾದ ಬೆಲ್ಲದಬಾಗೇವಾಡಿಯಲ್ಲಿ ವೀರಶೈವ – ಲಿಂಗಾಯತ ಸಂಪ್ರದಾಯದ ಅನ್ವಯ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಮೃತರ ಗೌರವಾರ್ಥ ಬೆಳಗಾವಿಯ ಎಲ್ಲಾ ಶಾಲಾ - ಕಾಲೇಜುಗಳು ಹಾಗೂ ಸರ್ಕಾರಿ ಕಚೇರಿಗಳಿಗೆ ರಾಜ್ಯ ಸರ್ಕಾರ ರಜೆ ಘೋಷಿಸಿತ್ತು. ಕತ್ತಿ ಅವರು ಎಂಟು ಬಾರಿ ಹುಕ್ಕೇರಿ ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿದ್ದರು.

ಹೃದಯಾಘಾತದಿಂದ ನಿನ್ನೆ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದ ಕತ್ತಿ, ಪತ್ನಿ, ಓರ್ವ ಪುತ್ರ ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ. ಇದಕ್ಕೂ ಮುಂಚೆ ವಿಮಾನದ ಮೂಲಕ ಅವರ ಕಳೇಬರವನ್ನು ಬೆಳಗಾವಿಗೆ ತರಲಾಯಿತು. ನಂತರ ಸೈನಿಕ ವಾಹನದಲ್ಲಿ ಮೃತದೇಹವನ್ನು ಬೆಲ್ಲದಬಾಗೇವಾಡಿಗೆ ಮೆರವಣಿಗೆಯಲ್ಲಿ ತರಲಾಯಿತು. ಸಂಜೆ ಪಾರ್ಥಿವ ಶರೀರದ ಅಂತ್ಯಕ್ರಿಯೆ ನೆರವೇರಿತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ ಹಾಗೂ ಸಿದ್ದರಾಮಯ್ಯ, ಬೊಮ್ಮಾಯಿ ಸಂಪುಟದ ಸಹೋದ್ಯೋಗಿಗಳು, ಶಾಸಕರು ಹಾಗೂ ಬಿಜೆಪಿ ಮುಖಂಡರು ಅಂತ್ಯಕ್ರಿಯೆ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಸರ್ಕಾರ ಈ ಹಿಂದೆ ರಾಜ್ಯಾದ್ಯಂತ ಒಂದು ದಿನದ ಶೋಕಾಚರಣೆ ಪ್ರಕಟಿಸಿತ್ತು. ನಂತರ ಅದನ್ನು ಸೆಪ್ಟೆಂಬರ್ 9ರವರೆಗೆ ವಿಸ್ತರಿಸಲಾಗಿದೆ.

## ಬುಡೋ ಮಾರ್ಷಲ್ ಆರ್ಟ್ಸ್ ಕ್ರೀಡಾಪಟುಗಳಿಗೆ ಪ್ರಶಸ್ತಿ




ದಾವಣಗೆರೆ, ಆ.7- ಲಕ್ಷ್ಮೇಶ್ವರದ ಶೈನ್ ಸ್ಪೋರ್ಟ್ಸ್ ಕರಾಟೆ ಅಕಾಡೆಮಿ ಆಶ್ರಯದಲ್ಲಿ ಸುಲೇಮಾನಿಯ ಶಾದಿಮಹಲ್ ನಲ್ಲಿ ಜರುಗಿದ 4ನೇ ರಾಷ್ಟ್ರೀಯ ಆಹ್ವಾನಿತ ಕರಾಟೆ ಚಾಂಪಿಯನ್‌ಶಿಫ್-22 ಸ್ಪರ್ಧೆಯಲ್ಲಿ ನಗರದ ಬುಡೋ ಮಾರ್ಷಲ್ ಆರ್ಟ್ಸ್ ಅಸೋಸಿಯೇಷನ್‌ನ ಕ್ರೀಡಾಪಟುಗಳು ಪ್ರಶಸ್ತಿ ಪಡೆದಿರುತ್ತಾರೆ. ಉಮರ್ ಫಾರೂಕ್ 35 ಕೆ.ಜಿ.ವಿಭಾಗದ ಕಥಾದಲ್ಲಿ ಪ್ರಥಮ ಮತ್ತು ಕುಮಿತೆಯಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ. 40 ಕೆ.ಜಿ.ವಿಭಾಗದ ಅಸಫನ್ ಕಥಾದಲ್ಲಿ ಮತ್ತು ಕುಮಿತೆಯಲ್ಲಿ ಪ್ರಥಮ ಸ್ಥಾನ ಹಾಗೂ ತೌಸಿಫ್ 45 ಕೆ.ಜಿ.ವಿಭಾಗದಲ್ಲಿ ಕುಮಿತೆಯಲ್ಲಿ ದ್ವಿತೀಯ ಮತ್ತು ಕಥಾದಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ. ಇವರಿಗೆ ಸನ್ಸಾಯ್ ಆರೀಫ್ ಖಾನ್ ತರಬೇತಿ ನೀಡಿದ್ದಾರೆ. ವಿಜೇತರನ್ನು ಬುಡೋ ಮಾರ್ಷಲ್ ಆರ್ಟ್ಸ್‌ನ ಅಧ್ಯಕ್ಷ ಹಿಮಾಯತ್‌ವುಲ್ಲಾ ಖಾನ್ ಅಭಿನಂದಿಸಿದ್ದಾರೆ.

## ಭೂಕಂಪವಾದರೂ ನಿರ್ಬಂಧ ಬಿಡದ ಚೀನ ಶಿಥಿಲ ಮನೆಗಳಿಂದಲೂ ಹೊರ ಬರದಂತೆ ತಡೆ

ಬೀಜಿಂಗ್, ಸೆ. 7 – ಚೀನಾದದಲ್ಲಿ ಸಂಭವಿಸಿದ ಭೂಕಂಪದಿಂದ ಮೃತರ ಸಂಖ್ಯೆ 74ಕ್ಕೆ ಏರಿಕೆಯಾಗಿದೆ ಹಾಗೂ 26 ಜನ ಕಣ್ಮರೆಯಾಗಿದ್ದಾರೆ. ಆದರೂ, ಸರ್ಕಾರ ಕೊರೊನಾ ನಿರ್ಬಂಧಗಳನ್ನು ಸಡಿಲಿಸದ ಕಾರಣ ಜನರು ಹತಾಶೆಗೆ ಗುರಿಯಾಗಿದ್ದಾರೆ. ಕೆಲವರು ಪ್ರತಿಭಟನೆಗೂ ಮುಂದಾಗಿದ್ದಾರೆ.

ಸಿಚುವಾನ್ ಪ್ರಾಂತ್ಯದಲ್ಲಿ ಸೋಮವಾರ ರಿಕ್ಟರ್ ಮಾಪಕದಲ್ಲಿ 6.8ರಷ್ಟಿದ್ದ ಭೂಕಂಪ ಸಂಭವಿಸಿತ್ತು. ಇದರಿಂದಾಗಿ ಮನೆಗಳಿಗೆ ತೀವ್ರ ಹಾನಿಯಾಗಿದೆ. ಈ ಪ್ರಾಂತ್ಯದಲ್ಲಿ ಕೆಲವೇ ಜನರಿಗೆ ಕೊರೊನಾ ಸೋಂಕಿದೆ. ಆದರೂ, 2.1 ಕೋಟಿ ಜನರಿರುವ ಚೆಂಗ್ಡು ಪ್ರಾಂತ್ಯದಲ್ಲಿ ಕಠಿಣ ನಿರ್ಬಂಧ ಹೇರಲಾಗಿದೆ.

ಭೂಕಂಪದಿಂದ ಮನೆಗಳು ಶಿಥಿಲವಾಗಿದ್ದರೂ ಮನೆಗಳಿಂದ ಹೊರ ಬರಬಾರದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಶ್ವದ ಬಹುತೇಕ ಭಾಗಗಳು ಕೊರೊನಾ ನಿರ್ಬಂಧಗಳನ್ನು ಸಡಿಲಿಸಿವೆ. ಆದರೆ, ಚೀನ ಮಾತ್ರ ಶೂನ್ಯ ಕೋವಿಡ್ ನೀತಿಯನ್ನು ಪಾಲಿಸುತ್ತಿದೆ.

ಚೀನಾದ ಕಮ್ಯುನಿಸ್ಟ್ ಪಕ್ಷ ಬಿಗಿ ನಿಯಂತ್ರಣದ ಅಧಿಕಾರ ನಡೆಸುತ್ತಿದೆ.

ಇಷ್ಟಾದರೂ ಆನ್‌ಲೈನ್ ಹಾಗೂ ನೇರ ಪ್ರತಿಭಟನೆಗಳು ಕಂಡು ಬರುತ್ತಿವೆ.

ಪ್ರತಿಭಟನೆ ನಡೆಸುವವರಿಗೆ ಚೀನಾದಲ್ಲಿ ತಿಂಗಳು ಇಲ್ಲವೇ ವರ್ಷಗಳ ಅವಧಿಯ ಶಿಕ್ಷೆ ವಿಧಿಸಲಾಗುತ್ತಿದೆ.

ಚೀನಾದ 33 ನಗರಗಳ 6.50 ಕೋಟಿ ಜನರನ್ನು ಪ್ರಸಕ್ತ ಲಾಕ್‌ಡೌನ್‌ಗೆ ಒಳಪಡಿಸಲಾಗಿದೆ. ಮುಂಬರುವ ಹಬ್ಬದ ದಿನಗಳಲ್ಲೂ ಜನರು ಪ್ರಯಾಣ ಮಾಡಬಾರದು ಎಂದು ನಿರ್ಬಂಧ ಹೇರಲಾಗಿದೆ.

# ದೇಶ ಕಟ್ಟುವಲ್ಲಿ ಶಿಕ್ಷಣಕ್ಕೆ ಮೊದಲ ಸ್ಥಾನ : ಹೆಬ್ಬಾಳು ಶ್ರೀ



**ಚಿತ್ರದುರ್ಗ ಮುರುಘಾ ಮಠದ 9ನೇ ಸಾಮೂಹಿಕ ಕಲ್ಯಾಣ ಮಹೋತ್ಸವ ಕಾರ್ಯಕ್ರಮ**

ಚಿತ್ರದುರ್ಗ, ಸೆ. 7 - ಮಾನವ ಬದುಕು ಹಸನಾಗಬೇಕೆಂದರೆ ಶಿಕ್ಷಣ ಬಹಳ ಮುಖ್ಯ. ದೇಶವನ್ನು ಕಟ್ಟುವಲ್ಲಿ ಶಿಕ್ಷಣ ಮೊದಲ ಸ್ಥಾನ ವಹಿಸುತ್ತದೆ ಎಂದು ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಹೇಳಿದರು.

ನಗರದ ಬಸವ ಕೇಂದ್ರ, ಶ್ರೀ ಜಗದ್ಗುರು ಮುರುಘ ರಾಜೇಂದ್ರ ಬೃಹನ್ಮಠದಲ್ಲಿ ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ ಚಿತ್ರದುರ್ಗ ಇವರ ಸಹಯೋಗದಲ್ಲಿ ನಡೆದ ಮೂವತ್ತೆರಡನೇ ವರ್ಷದ ಒಂಬತ್ತನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವ ಹಾಗೂ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದ ನೇತೃತ್ವ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಸರ್ವಪಲ್ಲಿ ರಾಧಾಕೃಷ್ಣನ್ ಅವರು ಸಾಮಾನ್ಯ ಶಿಕ್ಷಕರಾಗಿ, ನಂತರ ರಾಷ್ಟ್ರದ ಅತ್ಯುನ್ನತ ರಾಷ್ಟ್ರಪತಿ ಹುದ್ದೆಯನ್ನು ಅಲಂಕರಿಸಿದರು. ಅವರ ಸಾಧನೆ ನಮಗೆಲ್ಲ ಆದರ್ಶ. ದೀನ - ದಲಿತರ ಏಳ್ಗೆಗಾಗಿ ನಾಡಿನ ಅನೇಕ ಮಠಮಾನ್ಯಗಳು ಶ್ರಮಿಸುತ್ತಿವೆ. ಶ್ರೀಮಠದಲ್ಲಿ ಕರ್ತೃಗದ್ದುಗೆ ಪೂಜಾ ಕೈಂಕರ್ಯಗಳು, ನಿತ್ಯ ದಾಸೋಹ, ಮುರುಘಾವನ ವೀಕ್ಷಣೆ ಎಂದಿನಂತೆ ಇರುತ್ತದೆ. ಶ್ರೀಮಠದ ಭಕ್ತರು ಎಂದಿನಂತೆ ಸಹಕರಿಸಬೇಕೆಂದರು.

ಗೌರವ ಉಪಸ್ಥಿತಿ ವಹಿಸಿದ್ದ ಗುರುಮಠಕಲ್‌ನ ಶ್ರೀ ಶಾಂತವೀರ ಗುರು ಮುರುಘ ರಾಜೇಂದ್ರ ಸ್ವಾಮೀಜಿ ಮಾತನಾಡಿ, ಸಾರ್ವಜನಿಕರಿಗೆ ಆರ್ಥಿಕ ಹೊರೆಯಾಗದಂತೆ ಸಾಮೂಹಿಕ ಕಲ್ಯಾಣ ಮಹೋತ್ಸವ ಆರಂಭಿಸಲಾಯಿತು. 17 ಸಾವಿರ ಜೋಡಿಗಳು ವಿವಾಹವಾಗಿರುವುದು ದಾಖಲೆಯಾಗಿದೆ. ಇದೊಂದು ಆದರ್ಶ ಕಾರ್ಯಕ್ರಮ. ಸತಿ - ಪತಿಗಳೊಂದಾದ ಭಕ್ತಿ ಶಿವಂಗೆ ಹಿತವಪ್ಪುದು. ಸಾಂಸಾರಿಕ ಬದುಕಿನಲ್ಲಿ ಸಾಮರಸ್ಯ ಮುಖ್ಯ. ಬದುಕು ನಿಂತ ನೀರಾಗದೆ ನಿರಂತರ ಹರಿಯುವ ನದಿಯಾಗಬೇಕು. ಅದೆಷ್ಟೋ ಬಡಜನತೆ ಇಲ್ಲಿ ವಿವಾಹವಾಗಿ ಸುಂದರವಾದ ಬದುಕನ್ನು ಕಟ್ಟಿಕೊಂಡಿದ್ದಾರೆ. ಅವರ ಬದುಕು ಹಸನಾಗಿದೆ. ಬಸವಾದಿ ಶರಣರ ಆಶಯದಂತೆ ನಡೆಯುವ ಈ ವಿವಾಹ ಕಾರ್ಯಕ್ರಮ ಇಂದಿನ ದಿನಗಳಲ್ಲಿ ಪ್ರಸ್ತುತವೆನಿಸಿದೆ. ಮದುವೆ ಎಂಬುದು ಆಡಂಬರವಲ್ಲ, ಅದೊಂದು ಆದರ್ಶ ಎಂದರು.

ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಶಿಕ್ಷಕರ ದಿನಾಚರಣೆ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ 6 ಜೋಡಿಗಳ ವಿವಾಹ ನೆರವೇರಿತು.

ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯಕಾರಿ ಮಂಡಳಿಯ ಎಂ.ಟಿ. ಮಲ್ಲಿಕಾರ್ಜುನ ಸ್ವಾಮಿ, ಎಸ್.ಷಣ್ಮುಖಪ್ಪ, ಸಿದ್ದಾಪುರ ಎಸ್.ವಿ.ನಾಗರಾಜಪ್ಪ, ಹೆಚ್. ಆನಂದಪ್ಪ, ಮಹಡಿ ಶಿವಮೂರ್ತಿ ವೇದಿಕೆಯಲ್ಲಿದ್ದರು.

ಅಥಣಿಯ ಶ್ರೀ ಶಿವಬಸವ ಗುರು ಮುರುಘ ರಾಜೇಂದ್ರ ಸ್ವಾಮೀಜಿ, ದಾವಣಗೆರೆಯ ಶ್ರೀ ಬಸವ ಪ್ರಭು ಸ್ವಾಮೀಜಿ, ಹಾವೇರಿಯ ಶ್ರೀ ಬಸವಶಾಂತಲಿಂಗ ಸ್ವಾಮೀಜಿ, ಶರಣೆ ಮುಕ್ತಾಯಕ್ಕ, ಶ್ರೀ ಗುಂಡಯ್ಯ ಸ್ವಾಮೀಜಿ, ಹುಲಸೂರಿನ ಶ್ರೀ ಶಿವಾನಂದ ಸ್ವಾಮೀಜಿ ಮುಂತಾದವರು ಭಾಗವಹಿಸಿದ್ದರು.

ಜಮುರಾ ಕಲಾವಿದರು ವಚನ ಪ್ರಾರ್ಥನೆ ಮಾಡಿದರು. ಟಿ.ಪಿ. ಜ್ಞಾನಮೂರ್ತಿ ಸ್ವಾಗತಿಸಿದರು. ಶಿವಕುಮಾರ್ ನಿರೂಪಿಸಿದರು.

**ಎನ್.ಟಿ.ಪಿ. ಶ್ರೀನಿತ್ಯ ಸೌಹಾರ್ದ ಕೋ-ಆಪರೇಟಿವ್ ಲಿಮಿಟೆಡ್**

NTP shreenithya

**ಪ್ರಧಾನ ಕಛೇರಿ : 26731ಎ, ಎಸ್.ಐ. ಆರ್ಕೇಡ್, ಮೊದಲನೇ ಮಹಡಿ ಡೆಂಟಲ್ ಕಾಲೇಜ್ ರಸ್ತೆ, ದಾವಣಗೆರೆ-577 004.**

**ದೂರವಾಣಿ : 08192-220588, ಮೊ. : 96638 13674**

**9ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ**

ಮಾನ್ಯ ಸಹಕಾರಿ ಸದಸ್ಯರೇ, ಮೇಲ್ಕಂಡ ಸಹಕಾರಿಯ
**2021-22ನೇ ಸಾಲಿನ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು**
**ದಿನಾಂಕ : 23.09.2022ನೇ ಶುಕ್ರವಾರ ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ**
**ಕುವೆಂಪು ಕನ್ನಡ ಭವನ, ವಿದ್ಯಾನಗರ ರಸ್ತೆ, ದಾವಣಗೆರೆ ಇಲ್ಲಿ**
ಸಹಕಾರಿಯ ಅಧ್ಯಕ್ಷರಾದ ಶ್ರೀ ಇಂದ್ರಪ್ಪ ಹೆಚ್. ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ.
ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ.

**ದಿನಾಂಕ : 08.09.2022**
**ದಾವಣಗೆರೆ.**

**ಆಡಳಿತ ಮಂಡಳಿಯ ಪರವಾಗಿ**
**ಮುಖ್ಯ ಕಾರ್ಯನಿರ್ವಾಹಣಾಧಿಕಾರಿ**

# ರಾಷ್ಟ್ರಧ್ವಜದ ಮೇಲೆ ದಾಳಿ ನಡೆಸುತ್ತಿರುವ ಬಿಜೆಪಿ

## 'ಭಾರತ್ ಜೋಡೋ' ಪಾದಯಾತ್ರೆ ಚಾಲನೆಯಲ್ಲಿ ರಾಹುಲ್ ಗಾಂಧಿ ವಾಗ್ದಾಳಿ



ಕನ್ಯಾಕುಮಾರಿ, ಸೆ. 7 – ಎಲ್ಲ ಧರ್ಮ, ರಾಜ್ಯ ಹಾಗೂ ಭಾಷೆಗಳಿಗೆ ಸೇರಿರುವ ರಾಷ್ಟ್ರಧ್ವಜದ ಮೇಲೆ ಬಿಜೆಪಿ ಹಾಗೂ ಆರ್.ಎಸ್.ಎಸ್. ಗಳು ದಾಳಿ ನಡೆಸುತ್ತಿವೆ. ಧರ್ಮ ಹಾಗೂ ಭಾಷೆಯ ಆಧಾರದ ಮೇಲೆ ದೇಶವನ್ನು ಒಡೆಯುತ್ತಿವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭಾರತ್ ಜೋಡೋ ಯಾತ್ರೆಗೆ ಚಾಲನೆ ನೀಡುವ ಸಮಾವೇಶದಲ್ಲಿ ಮಾತನಾಡುತ್ತಿದ್ದ ಅವರು, ದೇಶದ ಪ್ರತಿಯೊಂದು ಸಂಸ್ಥೆಯ ಮೇಲೆ ದಾಳಿ ನಡೆಯುತ್ತಿದೆ. ಈ ಕಾಲಘಟ್ಟದಲ್ಲಿ ದೇಶವನ್ನು ಒಗ್ಗಟ್ಟಾಗಿಡಲು ಜನರು ಬೆಂಬಲಿಸಬೇಕಿದೆ ಎಂದು ಕರೆ ನೀಡಿದ್ದಾರೆ.

ನಾವು ಬಯಸುವ ಯಾವುದೇ ಧರ್ಮವನ್ನು ಪಾಲಿಸಲು ತ್ರಿವರ್ಣ ಧ್ವಜ ರಕ್ಷಣೆ ನೀಡುತ್ತದೆ. ಆದರೆ, ಅಂತಹ ಧ್ವಜದ ಮೇಲೆ ದಾಳಿ ನಡೆಯುತ್ತಿದೆ ಎಂದವರು ಹೇಳಿದ್ದಾರೆ. ಪ್ರತಿಯೊಂದು ಧರ್ಮ, ಪ್ರಾಂತ್ಯ ಹಾಗೂ ಭಾಷೆಯ ಜನರು ಜೊತೆಯಾಗಿ ರಾಷ್ಟ್ರಧ್ವಜ ಗಳಿಸಿದ್ದಾರೆ. ಇದು ಸುಲಭವಾಗಿ ಬಂದಿಲ್ಲ ಎಂದವರು ಹೇಳಿದ್ದಾರೆ.

ಭಾರತ ಅತಿ ಕೆಟ್ಟ ಆರ್ಥಿಕ ಬಿಕ್ಕಟ್ಟಿನ ಜೊತೆಗೆ, ಹೆಚ್ಚಿನ ನಿರುದ್ಯೋಗ ಸಮಸ್ಯೆ ಎದುರಿಸುತ್ತಿದೆ. ದೇಶ ಈಗ ವಿನಾಶದ ಕಡೆ ನಡೆಯುತ್ತಿದೆ ಎಂದೂ ರಾಹುಲ್ ಗಾಂಧಿ ಕಳವಳ ವ್ಯಕ್ತಪಡಿಸಿದ್ದಾರೆ.

ಇದಕ್ಕೂ ಮುಂಚೆ ರಾಹುಲ್ ಗಾಂಧಿ ಅವರು ಶ್ರೀಪೆರಂಬದೂರಿನಲ್ಲಿರುವ ಮಾಜಿ ಪ್ರಧಾನಿ ಹಾಗೂ ತಮ್ಮ ತಂದೆ ರಾಜೀವ್ ಗಾಂಧಿ ಅವರ ಸ್ಮಾರಕಕ್ಕೆ ತೆರಳಿ ನಮನ ಸಲ್ಲಿಸಿದರು.

ದ್ವೇಷ ಹಾಗೂ ವಿಭಜನೆಯಿಂದಾಗಿ ನಾನು ತಂದೆಯನ್ನು ಕಳೆದುಕೊಂಡಿದ್ದೇನೆ. ಇದೇ ಕಾರಣಕ್ಕಾಗಿ ದೇಶವನ್ನು ಕಳೆದುಕೊಳ್ಳಲು ಬಯಸುವುದಿಲ್ಲ ಎಂದವರು ಹೇಳಿದರು.

ಮಂಗಳವಾರ ರಾತ್ರಿ ಇಲ್ಲಿಗೆ ಆಗಮಿಸಿದ್ದ ರಾಹುಲ್, ಬುಧವಾರ ಬೆಳಿಗ್ಗೆ ಮಾಜಿ ಪ್ರಧಾನಿಗೆ ನಮನ ಸಲ್ಲಿಸಿದ ನಂತರ, ಮೌನವಾಗಿ ಕುಳಿತು ಪ್ರಾರ್ಥಿಸಿದರು. ಇದಕ್ಕೂ ಮುಂಚೆ ಸ್ಮಾರಕದಲ್ಲಿ ರಾಹುಲ್ ಗಾಂಧಿ ಅವರು ಸಸಿಯೊಂದನ್ನು ನೆಟ್ಟರು. ಈ ಸಂದರ್ಭದಲ್ಲಿ ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ ಕೆ.ಎಸ್. ಅಳಗಿರಿ, ಮತ್ತಿತರೆ ಕಾಂಗ್ರೆಸ್ ನಾಯಕರು ಉಪಸ್ಥಿತರಿದ್ದರು.

ಸಂತ ತಿರುವಳ್ಳುವರ್ ಹಾಗೂ ಸ್ವಾಮಿ ವಿವೇಕಾನಂದರ ಸ್ಮಾರಕ, ಹಿರಿಯ ನಾಯಕ ಕಾಮರಾಜ್ ಸ್ಮಾರಕಗಳಿಗೂ ರಾಹುಲ್ ಭೇಟಿ ನೀಡಿದರು. ನಂತರ ಗಾಂಧಿ ಮಂಟಪದಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಅವರು, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರಿಂದ ರಾಷ್ಟ್ರಧ್ವಜ ಪಡೆಯುವುದರೊಂದಿಗೆ ಪಾದಯಾತ್ರೆ ಆರಂಭಿಸಿದರು.

### ರಾಷ್ಟ್ರಧ್ವಜದೊಂದಿಗೆ ಪಾದಯಾತ್ರೆ ಆರಂಭಿಸಿದ ರಾಹುಲ್



ಕನ್ಯಾಕುಮಾರಿ, ಸೆ. 7 – ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ರಾಷ್ಟ್ರಧ್ವಜ ಹಸ್ತಾಂತರಿಸುವುದರೊಂದಿಗೆ ಪಕ್ಷದ 'ಭಾರತ್ ಜೋಡೋ ಯಾತ್ರೆ'ಗೆ ಚಾಲನೆ ನೀಡಲಾಗಿದೆ.

ಯಾತ್ರೆಯ ಆರಂಭಕ್ಕಾಗಿ ಆಯೋಜಿಸಲಾಗಿದ್ದ ಸಮಾವೇಶದಲ್ಲಿ ರಾಹುಲ್ ಗಾಂಧಿ ಅವರಿಗೆ ರಾಷ್ಟ್ರಧ್ವಜ ನೀಡಲಾಯಿತು. ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟ್ಯಾಲಿನ್ ಅವರು ರಾಹುಲ್ ಗಾಂಧಿಗೆ ರಾಷ್ಟ್ರಧ್ವಜ ನೀಡಿದರು.

ಗಾಂಧಿ ಸ್ಮಾರಕದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜ ಸ್ವೀಕರಿಸಿದ ರಾಹುಲ್ ಗಾಂಧಿ, ಯಾತ್ರೆಯಲ್ಲಿ ಮುನ್ನಡೆದರು.

ಈ ಸಂದರ್ಭದಲ್ಲಿ ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಹಾಗೂ ಛತ್ತೀಸ್‌ಘಡದ ಮುಖ್ಯಮಂತ್ರಿ ಭೂಪೇಶ್ ಬಾಘೇಲ್ ಮತ್ತಿತರರು ಉಪಸ್ಥಿತರಿದ್ದರು.

# ಕದಳಿ ವೇದಿಕೆಯಿಂದ ಶಿಕ್ಷಕರ ದಿನಾಚರಣೆ



ದಾವಣಗೆರೆ, ಸೆ. 7- ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಂಗಸಂಸ್ಥೆಯಾದ ಕದಳಿ ಮಹಿಳಾ ವೇದಿಕೆಯ ತಾಲ್ಲೂಕು ಘಟಕದ ವತಿಯಿಂದ 139 ನೇ ಕದಳಿ ಕಮ್ಮಟ ದತ್ತಿ ಉಪನ್ಯಾಸ, ಶಿಕ್ಷಕರ ದಿನಾಚರಣೆ ಹೂಗಾರ ಮಾದಯ್ಯ ಜಯಂತಿ ಆಚರಣೆಯನ್ನು ಸಂಜೀವಿನಿ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಮತ್ತು ಪ್ಯಾರಾಮೆಡಿಕಲ್ ಸೈನ್ಸ್ ಕಾಲೇಜಿನಲ್ಲಿ ನಡೆಸಲಾಯಿತು.

ಲಿಂ. ಡಾ. ಶಶಿಕಲಾ ದತ್ತಿ ಮತ್ತು ಲಿಂ. ಮಾಗನೂರು ರಾಜಶೇಖರಗೌಡ ದತ್ತಿಯನ್ನು ಮಾಡಲಾಯಿತು. ಶ್ರೀಮತಿ ಗಿರಿಜಮ್ಮ ಸೋಮಶೇಖರ ಗೌಡ ಮತ್ತು ಶ್ರೀಮತಿ ಸುಲೋಚನಾ ರಾಜಶೇಖರಗೌಡ ಇವರುಗಳು ದತ್ತಿ ದಾನಿಗಳಾಗಿದ್ದರು.

ಈಶ್ವರಿ ಮಹಿಳಾ ಫೌಂಡೇಶನ್ (ಮುಂಡರಗಿ) ಸಂಸ್ಥಾಪಕರಾದ ಪ್ರಭಾವತಿ ಹಿರೇಮಠ್ ಅವರು 'ಸರಳ ಜೀವನಕ್ಕೆ ವಚನ ಶಿಕ್ಷಣ ಅವಶ್ಯವಿದೆ' ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

ಮುಖ್ಯ ಅತಿಥಿಗಳಾದ ಸಂಜೀವಿನಿ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ಸೈನ್ಸ್ ಅಧ್ಯಕ್ಷ ಆರ್.ಎಚ್. ಲೀಲಾವತಿ ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲ ದುರ್ಗಪ್ಪ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ಕದಳಿ ಮಹಿಳಾ ವೇದಿಕೆ ಜಿಲ್ಲಾ ಘಟಕದ ಅಧ್ಯಕ್ಷರಾದ ಕುಸುಮಾ ಲೋಕೇಶ್ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಕದಳಿ ಮಹಿಳಾ ವೇದಿಕೆ ತಾಲ್ಲೂಕು ಘಟಕದ ಅಧ್ಯಕ್ಷರಾದ ವಿನೋದ ಅಜಗಣ್ಣನವರ್, ಉಪಾಧ್ಯಕ್ಷರಾದ ಮಮತಾ ನಾಗರಾಜ್ ಮಾತನಾಡಿದರು.

ಕಾರ್ಯದರ್ಶಿ ಕೆ.ಆರ್. ವಸಂತ ದತ್ತಿ ಹಾಗೂ ದತ್ತಿ ದಾನಿಗಳು ದತ್ತಿ ಉಪನ್ಯಾಸಕರ ಪರಿಚಯ ಮಾಡಿಕೊಟ್ಟರು. ಸಹ ಕಾರ್ಯದರ್ಶಿ ನಂದಿನಿ ಗಂಗಾಧರ್ ವಂದಿಸಿದರು. ಖಜಾಂಚಿ ಸೌಮ್ಯ ಸತೀಶ್ ನಿರೂಪಿಸಿದರು.

ಶಿಕ್ಷಕರ ದಿನಾಚರಣೆ ಪ್ರಯುಕ್ತ ಕಾಲೇಜಿನ ಮಕ್ಕಳಿಗೆ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿತ್ತು. ಕದಳಿ ಮಹಿಳಾ ವೇದಿಕೆಯ ಗೌರವಾಧ್ಯಕ್ಷರಾದ ಸಾವಿತ್ರಮ್ಮ ಸಿದ್ಧಪ್ಪ ಮತ್ತು ವಿನೋದ ಅಜಗಣ್ಣ ಪ್ರಬಂಧ ಸ್ಪರ್ಧೆಯ ಬಹುಮಾನದ ಪ್ರಾಯೋಜಕರಾಗಿದ್ದರು.


ಶರಣ ಸಾಹಿತ್ಯ ಪರಿಷತ್ತಿನ ನಗರ ಘಟಕದ ಅಧ್ಯಕ್ಷ ಎಂ. ಪರಮೇಶ್ವರಪ್ಪ ಸಿರಿಗೆರೆ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.


# ಜೈನ್ ತಾಂತ್ರಿಕ ಕಾಲೇಜಿನಲ್ಲಿ ಶಿಕ್ಷಕರ ದಿನಾಚರಣೆ



ದಾವಣಗೆರೆ, ಸೆ.7- ನಗರದ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಿವಿಲ್ ಇಂಜಿನಿಯರಿಂಗ್ ವಿಭಾಗದ ವತಿಯಿಂದ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ಪ್ರಾಂಶುಪಾಲ ಡಾ. ಡಿ.ಬಿ.ಗಣೇಶ್ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಗುರುಗಳ ಮಾರ್ಗದರ್ಶನದ ಮಹತ್ವವನ್ನು ತಿಳಿಸಿದರು. ಪ್ರಾಂಶುಪಾಲ ಡಾ. ಡಿ.ಬಿ.ಗಣೇಶ್, ಸಿವಿಲ್ ವಿಭಾಗದ ಮುಖ್ಯಸ್ಥ ಡಾ. ರಾಹುಲ್ ಪಾಟೀಲ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಪಂಜಾಬ್‌ಗೆ ಟ್ರ್ಯಾಕ್ಟರ್‌ಗಳ ಬಿಡಿ ಭಾಗಗಳ ಅಕ್ರಮ ಮಾರಾಟ : ದಾಳಿ





ದಾವಣಗೆರೆ, ಸೆ.7- ಯಾವುದೇ ದಾಖಲೆ ಇಲ್ಲದ ಮತ್ತು ಆರ್ ಟಿಓದಿಂದ ಪರವಾನಿಗೆ ಪಡೆಯದೇ ಅಕ್ರಮವಾಗಿ ನಗರದಿಂದ ಪಂಜಾಬ್‌ಗೆ ಟ್ರ್ಯಾಕ್ಟರ್‌ಗಳ ಬಿಡಿ ಭಾಗಗಳನ್ನು ಮಾರಾಟ ಮಾಡುತ್ತಿದ್ದ ಗ್ಯಾರೇಜ್ ಮೇಲೆ ಡಿಸಿಆರ್ ಬಿ ಪೊಲೀಸ್ ತಂಡ ದಾಳಿ ನಡೆಸಿ, ವಸ್ತುಗಳನ್ನು ವಶಕ್ಕೆ ಪಡೆದಿದೆ.

ಡಿಸಿಆರ್ ಬಿ ಘಟಕದ ಪೊಲೀಸ್ ಉಪಾಧೀಕ್ಷಕ ಬಿ.ಎಸ್. ಬಸವರಾಜ್ ನೇತೃತ್ವದ ತಂಡ ನಗರದ ರೈತರ ಬೀದಿ ಕಾಂಪೌಂಡ್, ಬಿಲಾಲ್ ಕಾಂಪೌಂಡ್ ಬಳಿ ಇರುವ ಗ್ಯಾರೇಜುಗಳನ್ನು ಪರಿಶೀಲನೆ ನಡೆಸಿದಾಗ, ಅಲ್ಲಿ ಹಳೆಯ ಟ್ರ್ಯಾಕ್ಟರ್ ಗಳನ್ನು ಫೈನಾನ್ಸ್, ಶೋರೂಂ ಮತ್ತು ರೈತರಿಂದ ಗ್ಯಾರೇಜ್ ಮಾಲೀಕರು ಖರೀದಿ ಮಾಡಿ, ಅವುಗಳನ್ನು ಯಾವುದೇ ಮೂಲ ದಾಖಲಾತಿ ಪಡೆಯದೇ ಮತ್ತು ಸಾರಿಗೆ ಇಲಾಖೆಯಿಂದ ಸ್ಕ್ರ್ಯಾಪ್ ಲೆಟರ್ ಪಡೆಯದೇ ಟ್ರ್ಯಾಕ್ಟರ್ ಗಳನ್ನು ಬಿಚ್ಚಿ ಪಂಜಾಬ್ ರಾಜ್ಯದ ಗುಜರಿ ಮಾಲೀಕರಿಗೆ ಮಾರಾಟ ಮಾಡುತ್ತಿರುವುದನ್ನು ಪತ್ತೆ ಮಾಡಲಾಗಿದೆ. ಈಗ ಆರ್ ಟಿಓ ಅಧಿಕಾರಿ ಹಾಗೂ ಪೊಲೀಸರಿಂದ ವಿಚಾರಣೆ ನಡೆಸಲಾಗಿದೆ.

ಗುಜರಿ ಅಂಗಡಿ ಮಾಲೀಕರು ನಿಯಮ ಬಾಹಿರವಾಗಿ ಟ್ರ್ಯಾಕ್ಟರ್‌ಗಳನ್ನು ಖರೀದಿ ಮಾಡಿ, ಸಾರಿಗೆ ಇಲಾಖೆಯಿಂದ ಅನುಮತಿ ಪಡೆಯದೇ ಈ ರೀತಿ ಮಾರಾಟ ಮಾಡುವುದು ಅಕ್ರಮ ಹಾಗೂ ಕಾನೂನು ಬಾಹಿರವಾಗಿದೆ. ಆರ್ ಟಿಓ ಪರವಾನಿಗೆ ಮತ್ತು ಸಂಬಂಧಪಟ್ಟ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಎನ್‌ಓಸಿ ಪಡೆಯದೇ ಬೇರೆ ರಾಜ್ಯಗಳಿಗೆ ಅಥವಾ ಗುಜರಿಗೆ ನೀಡುವುದು ಕಾನೂನು ಬಾಹಿರ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ತಿಳಿಸಿದ್ದಾರೆ.

# ಕೆಎಎಸ್ ಪರೀಕ್ಷೆ : ನಗರದ ಸ್ಫೂರ್ತಿ ಸಕ್ರಿ ರಾಜ್ಯಕ್ಕೆ ಪ್ರಥಮ

(1ನೇ ಪುಟದಿಂದ) ಬಾಣಸವಾಡಿ ವಿಭಾಗದ ಎಸಿಪಿ ಆಗಿರುವ ಎನ್. ಬಿ. ಸಕ್ರಿ ಮತ್ತು ಶ್ರೀಮತಿ ಸುನಿತಾ ಸಕ್ರಿ ದಂಪತಿ ಪುತ್ರಿ ಹಾಗೂ ನಗರದ ಪಶುವೈದ್ಯ ಇಲಾಖೆಯ ನಿವೃತ್ತ ಸಹಾಯಕ ನಿರ್ದೇಶಕ ಡಾ. ತಿಮ್ಮಪ್ಪ ನೆಶ್ವಿ ಅವರ ಮೊಮ್ಮಗಳು. ಡಾ. ಸ್ಫೂರ್ತಿ ಎಸ್.ಎಸ್ ಹೈಟೆಕ್ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಶಿಕ್ಷಣ ಪೂರೈಸಿದ್ದು, ಪ್ರಸ್ತುತ ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನ ಕುರುಡಿಯಲ್ಲಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

# ಜಿಎಂ ಸಹಕಾರಿಯಿಂದ ಸಮುದಾಯ ಭವನ ನಿರ್ಮಾಣ



ದಾವಣಗೆರೆ,ಸೆ.7- ಜಿ.ಎಂ. ಸಹಕಾರಿಯು ಸೌಹಾರ್ದ ಸಹಕಾರಿಗಳ ಪೈಕಿ ಜಿಲ್ಲೆಯಲ್ಲಿ ಆರ್ಥಿಕ ಚಟುವಟಿಕೆಗಳಲ್ಲಿ ಮೊದಲ ಸ್ಥಾನದಲ್ಲಿದೆ ಎಂದು ಹರ್ಷ ವ್ಯಕ್ತಪಡಿಸಿರುವ ಸಹಕಾರಿಯ ಅಧ್ಯಕ್ಷ ಜಿ.ಎಂ. ಪ್ರಸನ್ನಕುಮಾರ್, ಸಹಕಾರಿ ಸದಸ್ಯರಿಗೆ ಶೇಕಡ 12ರಷ್ಟು ಡಿವಿಡೆಂಡ್ ನೀಡುವುದಾಗಿ ಘೋಷಣೆ ಮಾಡಿದರು.

ನಗರದ ಜಿ.ಎಂ. ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ 2021-22 ನೇ ಸಾಲಿನ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿ.ಎಂ. ಸಹಕಾರಿಯಿಂದ ಸಮುದಾಯ ಭವನ ಕಟ್ಟಡವನ್ನು ನಿರ್ಮಿಸುವುದರ ಮೂಲಕ ಸಾಮಾಜಿಕ ಸೇವೆಗಳನ್ನು ನಡೆಸಲಾಗುವುದು. ಮುಂಬರುವ ದಿನಗಳಲ್ಲಿ 250 ಕೋಟಿ ದುಡಿಯುವ ಬಂಡವಾಳ ಹೊಂದಲು ಕಾರ್ಯಕ್ರಮ ರೂಪಿಸಲಾಗುವುದು ಎಂದು ಅವರು ತಿಳಿಸಿದರು.

ಸಹಕಾರಿಯ ಉಪಾಧ್ಯಕ್ಷ ಎಂ.ಆರ್. ಪ್ರಭುದೇವ ಮಾತನಾಡಿ, ಸಿಬ್ಬಂದಿಯವರ ಕಾರ್ಯಕ್ಷಮತೆ ಅಭಿವೃದ್ಧಿಗಾಗಿ ತರಬೇತಿ ಕಾರ್ಯಕ್ರಮಗಳನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದಿಂದ ಏರ್ಪಡಿಸಲಾಗುವುದು ಎಂದು ಹೇಳಿದರು.

ಯುವ ನಿರ್ದೇಶಕ ಜಿ. ಎಸ್. ಅನಿತ್ ಕುಮಾರ್, ಸದಸ್ಯರನ್ನು ಉದ್ದೇಶಿಸಿ ಠೇವಣಿ ನೀಡುವುದರ ಜೊತೆ ಜೊತೆಗೆ ಸಾಲದ ಬೇಡಿಕೆಯ ಪ್ರಸ್ತಾವಗಳನ್ನು ಸಲ್ಲಿಸುವ ಹೊಣೆಗಾರಿಕೆ ಇರುತ್ತದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಜಿಲ್ಲಾ ನಿರ್ದೇಶಕರಾಗಿ ಆಯ್ಕೆಯಾಗಿರುವ ಸಹಕಾರಿಯ ಉಪಾಧ್ಯಕ್ಷ ಎಂ.ಆರ್. ಪ್ರಭುದೇವ್ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ ಅವರನ್ನು ಸನ್ಮಾನಿಸಲಾಯಿತು.

ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಮತ್ತು ಅಂತಿಮ ವರ್ಷದ ಪದವಿ ಪರೀಕ್ಷೆಯಲ್ಲಿ ಅತಿ ಹೆಚ್ಚಿನ ಅಂಕಗಳನ್ನು ಪಡೆದ 40 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

**ವಾರ್ಷಿಕ ಮಹಾಸಭೆಯಲ್ಲಿ ಸಹಕಾರಿ ಅಧ್ಯಕ್ಷ ಜಿ. ಎಂ. ಪ್ರಸನ್ನಕುಮಾರ್**

ನಿರ್ದೇಶಕರಾದ ಶ್ರೀಮತಿ ವೈ. ಎಸ್. ಗಾಯತ್ರಿ, ಶ್ರೀಮತಿ ಪ್ರಮೀಳಾ ನಟ ರಾಜ್, ನೀಲಕಂಠಪ್ಪ ಜಿ. ಆರ್, ಸಿದ್ದನಗೌಡ ಸಿ. ಪಾಟೀಲ್, ಗುರು ಮೂರ್ತಿ ಎ. ಎಸ್., ಅರುಣ್ ಕುಮಾರ್ ಟಿ. ಜಿ., ರವೀಂದ್ರನಾಥ್ ಎ ಬಿ., ವಿಜಯಕುಮಾರ್ ಕೆ. ಎಸ್. ಹಾಜರಿದ್ದರು.

ಶಾಖಾ ಸಲಹಾ ಸಮಿತಿ ಸದಸ್ಯರುಗಳಾದ ಡಾ. ಪ್ರಕಾಶ್ ಕೆ.ಕೆ., ಡಾ. ಗಿರೀಶ್ ಬೋಳಕಟ್ಟೆ, ಮುನಿಕುಮಾರ್ ಆರ್.ಜಿ., ಅಶೋಕ್ ಟಿ.ಜಿ., ನಟರಾಜ್ ಬಿ. ಪಿ. ಜೆ., ಸತ್ಯ ನಾರಾಯಣ ಶೆಟ್ಟಿ, ಮಲ್ಲೇಶ್ ಬಿ.ಎನ್., ಚನ್ನಬಸಪ್ಪ ಬಿ., ಡಾ. ಗಿರೀಶ್, ಸ್ವಾಮಿನಾಥನ್ ಬಿ. ಆರ್., ಚಂದನ್ ಪಟೇಲ್ ಎಂ. ಪಿ. ಹಾಜರಿದ್ದರು. ಪ್ರಧಾನ ವ್ಯವಸ್ಥಾಪಕ ಎಸ್. ಎನ್. ಮಲ್ಲಪ್ಪ, ಸಲಹೆಗಾರ ಎಸ್. ಸಿ. ಮಹಾರುದ್ರಪ್ಪ , ಉಪ ಪ್ರಧಾನ ವ್ಯವಸ್ಥಾಪಕ ಐ. ಬಿ. ಕಡದಕಟ್ಟೆ, ಆಂತರಿಕ ಲೆಕ್ಕಪರಿಶೋಧಕ ಹನುಮಂತ ರೆಡ್ಡಿ ಎಂ. ಹೆಚ್. ಹಾಗೂ ನಾಗರಾಜ ಬಿ. ಹಾಜರಿದ್ದರು.

ಸಹಕಾರಿಯ ಉದ್ಯೋಗಿಗಳಾದ ಶ್ರೀಮತಿ ಯಶೋಧಮ್ಮ ಜಿ, ಕುಮಾರಿ ಶೃತಿ ಬಿ. ಎನ್, ಶ್ರೀಮತಿ ಕವಿತಾ ಜಿ. ಪಿ, ಕುಮಾರಿ ನಾಗಶ್ರೀ ಎಸ್. ಡಿ, ಮತ್ತು ಶ್ರೀಮತಿ ರೇಖಾ ಟಿ ಪ್ರಾರ್ಥನೆ ಸಲ್ಲಿಸಿದರು. ನಿರ್ದೇಶಕರಾದ ಬಸವರಾಜ್ ಎ. ಸಿ. ಸ್ವಾಗತಿ ಸಿದರು. ಗುರುಮೂರ್ತಿ ಕೆ. ಎಂ. ವಂದಿಸಿದರು. ಪ್ರಭಾರ ವ್ಯವಸ್ಥಾಪಕ ಶಿವಕುಮಾರ್ ಹೆಚ್. ಎಂ. ನಿರೂಪಿಸಿದರು.

# ಪ್ರೇರಣಾ ಸಾಂಸ್ಕೃತಿಕ ಸಂಸ್ಥೆಯಿಂದ ಶಿಕ್ಷಕರ ದಿನಾಚರಣೆ



ದಾವಣಗೆರೆ, ಸೆ. 7- ನಗರದ ಪ್ರೇರಣಾ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ಶಿಕ್ಷಕರ ದಿನಾಚರಣೆ ಆಚರಿಸಲಾಯಿತು. ಆವರಗೊಳ್ಳ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ರೇಣುಕಾಬಾಯಿ, ಕೃಷ್ಣರಾವ್ ಸಾವಂತ್, ಹಿರಿಯ ಪತ್ರಕರ್ತ ಬಕ್ಕೇಶ್ ನಾಗನೂರು, ಕರಾಟೆ ಪಟು ಚೈತ್ರ ಇವರಿಗೆ ಗೌರವ ಸಮರ್ಪಣೆ ಮಾಡಲಾಯಿತು. ಪ್ರೇರಣಾ ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷ ಚೇತನ್ ಶಿವುಕುಮಾರ, ಜಾಲಿನಗರದ ಹಿರಿಯ ಮುಖಂಡರಾದ ಆರ್. ಗಣೇಶ್ ರಾವ್, ಪರಮೇಶ್ವರಪ್ಪ, ಅಕ್ಕಮ್ಮ, ಬಸಣ್ಣ, ಜಯಶೀಲ, ಸುಶೀಲಮ್ಮ, ಸುಧಾ, ಬಸವರಾಜು, ಶ್ರೀನಿವಾಸ್, ಶಶಾಂಕ್, ರೇಷ್ಮಾ, ಅಂಬ್ರೀನ್ ಬಾನು, ಭರತ್ ಉಪಸ್ಥಿತರಿದ್ದರು. ಅಕ್ಕಮ್ಮ ಪ್ರಾರ್ಥಿಸಿದರು. ರೆಡ್‌ಕ್ರಾಸ್‌ನ ರವಿಕುಮಾರ್ ಸ್ವಾಗತಿಸಿದರು. ಶಶಾಂಕ್ ವಂದಿಸಿದರು.


**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ ದಾಟಿ ಹೊಸ ಬನಶಂಕರಿ ಲೇಔಟ್ ನಲ್ಲಿ 40x46, 40x46 East ಅಕ್ಕ-ಪಕ್ಕ, 80x46 East, 40x46 East 40 ಅಡಿ ರೋಡಿಗಿದೆ. ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಲೀಸ್‌ಗೆ ಇದೆ**
3 BHK ಡುಪ್ಲೆಕ್ಸ್ ಹೌಸ್ (EAST FACE) 3 ಅಟ್ಯಾಚ್ ಬಾತ್ ರೂಂ ತರಳಬಾಳು ಬಡಾವಣೆಯಲ್ಲಿ ಲೀಸ್‌ಗೆ ಇದೆ.
Agent
95385 65909

**ಕೆಲಸಕ್ಕೆ ಬೇಕಾಗಿದ್ದಾರೆ**
ಅಡುಗೆ ಭಟ್ಟರು, ಸರ್ವರ್, ಕ್ಲೀನರ್ ಕೆಲಸ ಮಾಡಲು ಬೇಕಾಗಿದ್ದಾರೆ. ಸಂಪರ್ಕಿಸಿ
ನಿಸರ್ಗ ಫ್ಯಾಮಿಲಿ ರೆಸ್ಟೋರೆಂಟ್
90083 45177

**ಬೇಕಾಗಿದ್ದಾರೆ**
ಕೌಂಟರ್ ನಲ್ಲಿ ಮಾರಾಟ ಮಾಡಲು ಬೇಕಾಗಿದ್ದಾರೆ. ಪುರುಷ /ಮಹಿಳೆ
ಪರಿಮಳ ಕಾಫೀ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊ : 94482 72734

**ಮನೆ ಬಾಡಿಗೆಗೆ ಇದೆ**
3BHK ಮೊದಲನೇ ಮಹಡಿ ಮನೆ ಲೀಸ್‌ಗೆ/ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ. ಸಿ.ವಿ ಶಿವಕುಮಾರ್ ಬಳ್ಳಾರಿ ಸಿದ್ದಪ್ಪ ಪಾರ್ಕ್ ಹತ್ತಿರ, ಕೆ.ಬಿ ಬಡಾವಣೆ, ದಾವಣಗೆರೆ-2.
81478 74601
ಸ್ವಂತ ಬೋರ್‌ವೆಲ್ ಇದೆ. ಕಛೇರಿಗೂ ಬಾಡಿಗೆಗೆ ಇದೆ.

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಗಂಡಸರು, ಹೆಂಗಸರು ಬೇಕಾಗಿದ್ದಾರೆ.
ಫೋ. : 80730 55886

**Computer Faculty Required**
in MS-Office, DTP, Tally with experience Attractive Salary
Keonics Yuva.com
97425 88098

**WANTED**
1. Recepionist
2. Staff Nurses
3. Lab Technician
SHILPA DIAGNOSTICS
MCC B Block Near Swimming Pool, Davangere.
98440 65638

**ಸಂದೀಪ್ ರೆಗ್ಜಿನ್ ಹೌಸ್**
ನಮ್ಮಲ್ಲಿ ಎಲ್ಲಾ ತರಹದ ಕಿಟಕಿಗಳಿಗೆ ಸೊಳ್ಳೆ ಮೆಷ್ ಹಾಕಲಾಗುತ್ತದೆ.
A.V.K.College Road, Davanagere-577 002.
Sudeep S.Hiremath
98860 26813

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೊರಿಯರ್ ಸೌಲಭ್ಯವಿದೆ.
97432 17566, 91084 18233

**ಬೇಕಾಗಿದ್ದಾರೆ**
ವಯಸ್ಸಾದ ರೋಗಿಯನ್ನು ನಿರ್ವಹಿಸಲು ಪುರುಷ ನರ್ಸ್ ಬೇಕಾಗಿದ್ದಾರೆ. ಅನುಭವ ಹೊಂದಿರಬೇಕು ಸಂಪರ್ಕಿಸಿ :
ಇಕ್ಬಾಲ್
91088 79412

**ಸೈಟುಗಳು ಮಾರಾಟಕ್ಕಿವೆ**
40x60 West ವಿವೇಕಾನಂದ ಬಡಾವಣೆಯಲ್ಲಿ 40x60 West, ಇಂಡೋರ್ ಸ್ಟೇಡಿಯಂ ಹತ್ತಿರ. 40x45 West LIC ಕಾಲೊನಿಯಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬಾಡಿಗೆ ಮನೆಗಳು ದೊರೆಯುತ್ತವೆ**
ನಿಜಲಿಂಗಪ್ಪ ಬಡಾವಣೆಯಲ್ಲಿ ವಿನಾಯಕ ಬಡಾವಣೆಯಲ್ಲಿ ಆಂಜನೇಯ ಬಡಾವಣೆಯಲ್ಲಿ ಸಿಂಗಲ್ ಬೆಡ್ ರೂಂ ಮನೆ, 2 ಬೆಡ್ ರೂಂ ಮನೆ, 3 ಬೆಡ್ ರೂಂ ಮನೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಜಮೀನು ಕೊಳ್ಳಲು ಬೇಕಾಗಿರುತ್ತದೆ**
(1 ರಿಂದ 20 ಎಕರೆ)
ಹರಿಹರ / ದಾವಣಗೆರೆ ಹತ್ತಿರ (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
SGK REALTORS
63608 66997

**ಮನೆ ಬಾಡಿಗೆಗೆ/ಭೋಗ್ಯಕ್ಕೆ ಇದೆ**
ಎರಡು ಬೆಡ್ ರೂಂ ಹೊಂದಿರುವ ಮೊದಲನೇ ಮಹಡಿಯ ಮನೆ ಬಾಡಿಗೆ/ಭೋಗ್ಯಕ್ಕೆ ಇರುತ್ತದೆ. (ಸಸ್ಯಹಾರಿಗಳಿಗೆ ಮಾತ್ರ)
ಪೂಜಾ ಇಂಟರ್‌ನ್ಯಾಷನಲ್ ಹೋಟೆಲ್ ಹಿಂಭಾಗ ವಿಳಾಸ: ಮನೆ ನಂ.164, 10ನೇ ತಿರುವು 'ಎ'ಬ್ಲಾಕ್, ದೇವರಾಜ ಅರಸ್ ಬಡಾವಣೆ, ದಾವಣಗೆರೆ.
90351 09371

**ಕೆಲಸಕ್ಕೆ ಬೇಕಾಗಿದ್ದಾರೆ**
ಸ್ವೀಪರ್ (ಸ್ವಚ್ಛತಾ) ಮತ್ತು ಅಡುಗೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ
96634 32551

**3 ಎಕರೆ ಜಮೀನು ಮಾರಾಟಕ್ಕಿದೆ**
NH-4 (ಹೊಳೆ) ಹರಿಹರ ಹತ್ತಿರ, @Rs 55 Lakhs / Acr (ಮಧ್ಯರ್ತಿಗಳಿಗೆ ಅವಕಾಶವಿಲ್ಲ)
Contact : SGK Realtors
M : 63608 66997

**WANTED**
Learner's & Fresher's (Gents) Required For Audior Office
Contact:
77607 40760

**ಬೇಕಾಗಿದ್ದಾರೆ**
ಕಂಪ್ಯೂಟರ್ ಆಪರೇಟರ್ ಮತ್ತು ಆಫೀಸ್ ಅಸಿಸ್ಟೆಂಟ್ ಹುದ್ದೆಗೆ ಲೇಡೀಸ್ ಬೇಕಾಗಿದ್ದಾರೆ.
91108 98377

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ಇಂದು ದಿನಾಂಕ 08.09.2022ರ ಗುರುವಾರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ,
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ.
ಸಂಬಳ : 10,000. ಊಟ, ರೂಂ ಉಚಿತ. ಸಂಪರ್ಕಿಸಿ :
97400 98047, 97400 98064

**Required**
office work & reception for PU science college (2 ladies) with accommodation, Boys hostel warden, DTP worker for question paper typing.
Location: Davangere. Contact :
87628 67557, 99168 18369

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**AQUA FRESH**
RO WATER PURIFIER AVAILABLE AT JUST 5990/- ONLY
SALES & SERVICE
PLZ CONTACT :
77950 14817

**ಆಹಾರ ಖರೀದಿಸಿ ಹಣ ಗಳಿಸಿ**
ಕೇವಲ 8100 ರೂ. ಗಳ ಆಹಾರ ಬಳಸಿರಿ 8,85,720 /- ರೂ ಕ್ಯಾಷ್ ಬ್ಯಾಕ್ ಪಡೆಯಿರಿ (ಟಿ&ಸಿ)
No-Joining,
AUTO FILL WORK
86602 35013

**EDUCATION LOANS**
from Nationalized Bank for Medical/Engineering MS/ MD/PILOT Etc Courses from 20 Lakhs to 3 Crores.
India & Abroad Study
81474 15315

**ಮನೆ ಬಾಡಿಗೆಗೆ**
ವಾಸ್ತು ಪ್ರಕಾರದ, ಪೂರ್ವ ಮುಖದ, ಹೌಸಿಂಗ್ ಬೋರ್ಡ್ ಕಾಲೋನಿ, ಮೆಡಿಕಲ್ ಹಾಸ್ಟೆಲ್ ಪಕ್ಕ, Extended MCC 'B' Block, ಕಾರ್ಪೊರೇಷನ್ ನೀರು, ಬೋರ್, ಕಾರ್ ಪಾರ್ಕಿಂಗ್, ಸ್ವತಂತ್ರವಾದ 3 BHK / 2 BHK ಮನೆ (ಸಸ್ಯಹಾರಿಗಳಿಗೆ ಮಾತ್ರ)
63015 58346

**ಹೆಸರು ದೃಢೀಕರಣ**
ಸಿದ್ದೇಶ್ ಹೆಚ್ ತಂದೆ ಹಾಲೇಶಪ್ಪ, #20 ಮದಿಕೇರಿಪುರ, ರಾಮಗೊಂಡನಹಳ್ಳಿ, ದಾವಣಗೆರೆ ತಾಲ್ಲೂಕು ವಾಸಿಯಾದ ನಾನು ನನ್ನ ಆಧಾರ ಕಾರ್ಡ್‌ನಲ್ಲಿ ಸಿದ್ದೇಶ್ ಹೆಚ್ ಮಾಡಿದ್ದು, ಡಿ.ಎಲ್ ನಲ್ಲಿ ಸಿದ್ದಲಿಂಗೇಶ್ವರ್ ಡಿ.ಎಲ್ ಎಂದು ಇರುತ್ತದೆ. ಈ ಎರಡೂ ಹೆಸರುಗಳು ನನ್ನವೇ ಆಗಿದ್ದು ಇನ್ನು ಮುಂದೆ ನಾನು ಸಿದ್ದೇಶ್ ಹೆಚ್ ಎಂಬ ಹೆಸರಿನಲ್ಲಿ ಮುಂದುವರೆಯುತ್ತೇನೆಂದು ದಿ. 3.9.2022 ರಂದು ನೋಟರಿ ದಾವಣಗೆರೆಯವರ ಮುಂದೆ ಪ್ರಮಾಣೀಕರಿಸಿದ್ದೇನೆ.
ಸಹಿ /- ಸಿದ್ದೇಶ್ ಹೆಚ್

**ಟೆಲಿಕಾಲರ್ ಬೇಕಾಗಿದ್ದಾರೆ**
ಹೊಸದಾಗಿ ಪ್ರಾರಂಭವಾಗಿರುವ ಇ-ಕಾಮರ್ಸ್ ಸಂಸ್ಥೆಗೆ ಟೆಲಿಕಾಲರ್ (Female) ಮತ್ತು ಕಂಪನಿ ಪ್ರಮೋಟರ್ಸ್ ಮಾರ್ಕೆಟಿಂಗ್ ಮ್ಯಾನೇಜರ್ ಬೆಂಗಳೂರಿನಲ್ಲಿ ವಸತಿಯೊಂದಿಗೆ ಆಕರ್ಷಕ ಸಂಬಳ. ಹೊಸಬರಿಗೂ ಅವಕಾಶ ಇದೆ. ಸಂಪರ್ಕಿಸಿ:
99022 25186

**50% ಡಿಸ್ಕೌಂಟ್ ಸೇಲ್**
ನಮ್ಮಲ್ಲಿ 50% ವರೆಗೆ (ಆಯ್ದ ವಸ್ತುಗಳಿಗೆ) ಭಾರೀ ರಿಯಾಯಿತಿ ಮಾರಾಟ. ತ್ವರೆ ಮಾಡಿ.
ಉದಯ ಸೂಪರ್ ಬಜಾರ್,
ಹದಡಿ ರಸ್ತೆ, ದಾವಣಗೆರೆ.
ಸಂಪರ್ಕಿಸಿ:
96110 16817

**ಅಧಿಕೃತ ಚೀಟಿ ಸಂಸ್ಥೆ**
ರೂ. 1 ಲಕ್ಷ ಚೀಟಿ ಪ್ರಾರಂಭ 50 ಸದಸ್ಯರು 1400 ರಿಂದ 2,000 /- ರೂ ವರೆಗೆ,
ಸ್ಕಂದ ಚಿಟ್ ಫಂಡ್ಸ್- (ರಿ)
ಸಂಪರ್ಕಿಸಿ:
78997 75159

**Long Term Coaching**
Neet /JEE / K-CET. with free materials 100% ಫಲಿತಾಂಶ
Sinchan coaching center
Near SBI ATM Ram & co Circle, Davangere.
88614 45913, 90195 80600

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ಬೇಕಾಗಿದ್ದಾರೆ**
ಬಾರ್ & ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ಸಪ್ಲೈಯರ್, ಅಡುಗೆ ಭಟ್ಟರು ಬೇಕಾಗಿದ್ದಾರೆ
97427 69919
84315 41866

**WANTED**
Required a Lady Candidate for Computer Billing with Computer Knowledge and Tally with Qualification: PUC, B.Com or B.A
94484 61674, 97317 48890

**ಪ್ರವೇಶ ಪ್ರಕಟಣೆ**
ಡಿಪ್ಲೊಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**Change of Name**
I Smt Ganga Govinda Naik w/o Govinda N Naik, 53 Years Resident #1300 Bharath Colony, 4th Cross RMC Road, Dvg. In my T.C my name as Gangamma Rajanna Medar and Date of Birth is 5th March 1969. After my marriage my Name as changed as Ganga Govinda Naik as per Affidavit dated 13.7.2022. In future all my records and Transactions will be in my name as Undersigned. Sd/- Ganga Govinda Naik

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳವರು ಬೇಕಾಗಿದ್ದಾರೆ. ಸಂಪರ್ಕಿಸಿ :
89046 91084

**House For Rent / Lease**
2 BHK & 1 BHK Near Podar International School, J.H Patel Badavane Davanagere
95359 99218, 97426 74310

## ಪತ್ರಕರ್ತರ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕೆ ಆಹ್ವಾನ

ದಾವಣಗೆರೆ, ಸೆ.7- ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಜಿಲ್ಲಾ ಘಟಕದ ವತಿಯಿಂದ ಜಿಲ್ಲೆಯ ಪತ್ರಕರ್ತರ ಮತ್ತು ಪತ್ರಿಕಾ ಕಚೇರಿಯಲ್ಲಿ ಕೆಲಸ ಮಾಡುವ ಸಿಬ್ಬಂದಿಗಳ ಪತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ಇದೇ ದಿನಾಂಕ 10ರಂದು ನೀಡಲಾಗುವುದು ಎಂದು ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ತಿಳಿಸಿದ್ದಾರೆ.

2021-22ನೇ ಸಾಲಿನ ಶೈಕ್ಷಣಿಕ ವರ್ಷದ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ. 80ಕ್ಕೂ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾಗಿರುವ ಪತ್ರಕರ್ತರ ಮತ್ತು ಪತ್ರಿಕಾ ಕಚೇರಿಯ ಸಿಬ್ಬಂದಿಯ ಮಕ್ಕಳು ದಾವಣಗೆರೆ ಜಿಲ್ಲಾಮಟ್ಟದ ಪುರಸ್ಕಾರಕ್ಕೆ ಮತ್ತು ಶೇ.90ಕ್ಕೂ ಹೆಚ್ಚು ಅಂಕಗಳನ್ನು ಪಡೆದಿರುವ ಪತ್ರಕರ್ತರ ಮಕ್ಕಳು ಕರ್ನಾಟಕ ರಾಜ್ಯ ಮಟ್ಟದ ಪುರಸ್ಕಾರಕ್ಕೆ ಅರ್ಹರಾಗಿರುತ್ತಾರೆ.

ದಾವಣಗೆರೆ ಜಿಲ್ಲಾ ಮಟ್ಟದ ಪುರಸ್ಕಾರದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 80ಕ್ಕೂ ಹೆಚ್ಚು ಅಂಕಗಳನ್ನು ಪಡೆದ ಪತ್ರಕರ್ತರ ಮಕ್ಕಳನ್ನು 'ವಿದ್ಯಾಸಿರಿ' ಪ್ರಶಸ್ತಿಯೊಂದಿಗೆ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ. 80ಕ್ಕೂ ಹೆಚ್ಚು ಅಂಕಗಳನ್ನು ಪಡೆದ ಪತ್ರಕರ್ತರ ಮಕ್ಕಳನ್ನು 'ವಿದ್ಯಾರತ್ನ' ಪ್ರಶಸ್ತಿಯೊಂದಿಗೆ ಪುರಸ್ಕರಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಪ್ರಥಮ ಭಾಷೆ ಕನ್ನಡದಲ್ಲಿ 125ಕ್ಕೆ 120ಕ್ಕೂ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ವಿಶೇಷವಾಗಿ ಪುರಸ್ಕರಿಸಲಾಗುವುದು. ಅರ್ಹ ಪತ್ರಕರ್ತರ ಮಕ್ಕಳು ಅರ್ಜಿಯನ್ನು ಈ ಕೆಳಕಂಡ ವಿಳಾಸದಲ್ಲಿ ಪಡೆದು, ಸ್ವ-ವರ, ಭಾವಚಿತ್ರ, ಅಂಕಪಟ್ಟಿ ಜೆರಾಕ್ಸ್ ಪ್ರತಿಯೊಂದಿಗೆ ಇದೇ ದಿನಾಂಕ 9ರೊಳಗಾಗಿ ಈ ವಿಳಾಸಕ್ಕೆ ತಂದು ಸಲ್ಲಿಸಬೇಕು ಎಂದು ಖಜಾಂಚಿ ಎನ್.ವಿ. ಬದರಿನಾಥ್ ತಿಳಿಸಿದ್ದಾರೆ.

ವಿಳಾಸ : ಎ. ಫಕ್ರುದ್ದೀನ್, ಪ್ರಧಾನ ಕಾರ್ಯದರ್ಶಿ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಸಂಪಾದಕರು, 'ದಾವಣಗೆರೆ ಇಮೇಜ್' ಪತ್ರಿಕಾ ಕಾರ್ಯಾಲಯ, ಮಹಾನಗರ ಪಾಲಿಕೆ ಮಳಿಗೆ ನಂ. 8-9, ಸಿಟಿ ಸೆಂಟ್ರಲ್ ಹಾಸ್ಪಿಟಲ್ ಹಿಂಭಾಗ, ಪಿ.ಜೆ. ಬಡಾವಣೆ, ದಾವಣಗೆರೆ. ವಿವರಕ್ಕೆ ಸಂಪರ್ಕಿಸಿ : 94482-77772, 86180-02539. 94487-28858.

# 23 ಟಿಎಂಸಿ ನೀರು ಲಿಫ್ಟ್ ನಂತರ ಮೇಲ್ದಂಡೆಗೆ ನೀರು ಹರಿಸಿ

## ಭದ್ರಾ ಜಲಾಶಯಕ್ಕೆ ಶಾಸಕ ರವೀಂದ್ರನಾಥ, ಸಂಸದ ಸಿದ್ದೇಶ್ವರ ಬಾಗಿನ ಅರ್ಪಣೆ



ದಾವಣಗೆರೆ, ಸೆ.7- ಭದ್ರಾ ಅಚ್ಚುಕಟ್ಟು ಪ್ರದೇಶದ ರೈತರ ಬೆಳೆಗಳಿಗೆ ನೀರು ಸಿಗಬೇಕು. ಅಪ್ಪರ್ ಭದ್ರಾ ಯೋಜನೆಗೆ ನೀರು ಹರಿಸುವ ಮುಂಚೆ ತುಂಗಾ ಜಲಾಶಯದಿಂದ ಭದ್ರಾ ಜಲಾಶಯಕ್ಕೆ 23 ಟಿಎಂಸಿ ನೀರು ಲಿಫ್ಟ್ ಮಾಡಬೇಕು. ನಂತರವಷ್ಟೇ ಭದ್ರಾ ಮೇಲ್ದಂಡೆಗೆ ನೀರು ಹರಿಸಬೇಕು ಎಂದು ಶಾಸಕ ಎಸ್.ಎ. ರವೀಂದ್ರನಾಥ ತಿಳಿಸಿದರು.

ಅವರು, ಇಂದು ಭಾರತೀಯ ರೈತ ಒಕ್ಕೂಟ ಹಾಗೂ ಬಿಜೆಪಿಯಿಂದ ಲಕ್ಕವಳ್ಳಿಯಲ್ಲಿನ ಭದ್ರಾ ಜಲಾಶಯಕ್ಕೆ ಬಾಗಿನ ಅರ್ಪಿಸಿದ ನಂತರ ನಡೆದ ವೇದಿಕೆ ಕಾರ್ಯಕ್ರಮವನ್ನುಉದ್ಘಾಟಿಸಿ ಅವರು ಮಾತನಾಡಿದರು.

ಬಚಾವತ್ ತೀರ್ಪಿನ ಪ್ರಕಾರ ತುಂಗಾ ಜಲಾಶಯದಿಂದ 23 ಟಿಎಂಸಿ ನೀರನ್ನು ಭದ್ರಾಗೆ ಲಿಫ್ಟ್ ಮಾಡಿಸಿದ ನಂತರ ಎಲ್ಲಿಗಾದರೂ ಭದ್ರಾ ನೀರನ್ನು ಒಯ್ಯಿರಿ. ಇದಕ್ಕೆ ಅಭ್ಯಂತರ ಇಲ್ಲ. ಆದರೆ, ಭದ್ರಾ ಅಚ್ಚುಕಟ್ಟು ಪ್ರದೇಶದ ರೈತರಿಗೆ ಯಾವುದೇ ಕಾರಣಕ್ಕೂ ಬೇಸಿಗೆ, ಮಳೆಗಾಲದ ಬೆಳೆಗೆ ನೀರಿನ ತೊಂದರೆ ಆಗದಂತೆ ಭದ್ರಾ ಕಾಡಾ ಸಮಿತಿ ಅಧ್ಯಕ್ಷರು, ಆಡಳಿತಾಧಿಕಾರಿಗಳು, ನೀರಾವರಿ ಇಲಾಖೆ ಗಮನ ಹರಿಸಬೇಕು ಎಂದು ಹೇಳಿದರು.

ಅಪ್ಪರ್ ಭದ್ರಾಗೆ ಅಳವಡಿಸಿದ 4-5 ಮೋಟಾರ್‌ನಿಂದ ನೀರು ಕೊಂಡೊಯ್ಯಬೇಕು. ಸರ್ಕಾರದಿಂದ ಈ ಬಗ್ಗೆ ಆದೇಶವಾಗಿದ್ದರೂ ಇನ್ನೂ ಒಂದು ಮೋಟಾರ್‌ಗೂ ಚಾಲನೆ ಸಿಕ್ಕಿಲ್ಲ. ಜೊತೆಗೆ ಅಪ್ಪರ್ ಭದ್ರಾ ಕೆಲಸವನ್ನೇ ಮಾಡಿಲ್ಲ. ಪದೇ ಪದೇ ಅಸಡ್ಡೆ ಸರಿಯಲ್ಲ. ನೀರಾವರಿ ಬಗ್ಗೆ ಅನುಭವಿಯಾದ ಸಿಎಂ ಬಸವರಾಜ ಬೊಮ್ಮಾಯಿ ಇಂಜಿನಿಯರ್ ಸಹ ಆಗಿದ್ದಾರೆ. ಆದಷ್ಟು ಬೇಗನೆ ಅಪ್ಪರ್ ಭದ್ರಾ ಮೋಟಾರ್ ಆರಂಭಿಸಲು ಕ್ರಮ ಕೈಗೊಳ್ಳಲಿ ಎಂದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಭದ್ರಾ ಡ್ಯಾಂ ತುಂಬಿರುವುದು ಹರ್ಷದ ಸಂಗತಿ. ಅಚ್ಚುಕಟ್ಟು ರೈತರಿಗೆ ಮಳೆಗಾಲ, ಬೇಸಿಗೆ ಬೆಳೆಗಳಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳಬೇಕು. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ರೈತರು, ಜನರು ಆಶೀರ್ವದಿಸಬೇಕು ಎಂದು ಕರೆ ನೀಡಿದರು.

ಜಗಳೂರು ಶಾಸಕ ಎಸ್.ವಿ. ರಾಮಚಂದ್ರ ಮಾತನಾಡಿದರು.

ನೀರಾವರಿ ತಜ್ಞ ಪ್ರೊ. ಸಿ. ನರಸಿಂಹಪ್ಪ, ಶಾಸಕ ಪ್ರೊ. ಎನ್. ಲಿಂಗಣ್ಣ, ಮಾಜಿ ಶಾಸಕ ಬಿ.ಪಿ. ಹರೀಶ್, ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ. ಬಸವರಾಜ ನಾಯ್ಕ, ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಭಾರತೀಯ ರೈತ ಒಕ್ಕೂಟದ ಜಿಲ್ಲಾಧ್ಯಕ್ಷ ಶಾಮನೂರು ಹೆಚ್.ಆರ್. ಲಿಂಗರಾಜ್, ಉಪಾಧ್ಯಕ್ಷ ಕೊಂಡಜ್ಜಿ ಶಾನುಭೋಗರ ನಾಗರಾಜರಾವ್, ಮೇಯರ್ ಜಯಮ್ಮ ಗೋಪಿನಾಯ್ಕ, ದೂಡಾ ಅಧ್ಯಕ್ಷ ಕೆ.ಎಂ.ಸುರೇಶ, ಪಾಲಿಕೆ ಸದಸ್ಯ ಎಸ್.ಟಿ. ವೀರೇಶ್, ಮುಖಂಡರಾದ ಯಶವಂತರಾವ್ ಜಾಧವ್, ಶ್ರೀನಿವಾಸ ದಾಸಕರಿಯಪ್ಪ ಸೇರಿದಂತೆ, ಇತರರು ಇದ್ದರು.

### ಕರಗದ ಕಾರ್ಮೋಡ

(6ನೇ ಪುಟದಿಂದ) ಭಾನುವಾರ ಒಂದೇ ದಿನ 131.6 ಮಿ.ಮೀ. ಮಳೆಯಾಗಿದೆ. ಈ ಹಿಂದೆ ಸೆಪ್ಟೆಂಬರ್ 26, 2014ರಲ್ಲಿ 132.6 ಮಿ.ಮೀ. ಹಾಗೂ 1988ರ ಸೆಪ್ಟೆಂಬರ್ 12ರಂದು 177.6 ಮಿ.ಮೀ. ಮಳೆಯಾಗಿತ್ತು ಎಂದು ಹಿರಿಯ ಹವಾಮಾನ ವಿಜ್ಞಾನಿ ಆರ್.ಕೆ. ಜೇನಮಣಿ ತಿಳಿಸಿದ್ದಾರೆ.

ಹೆಚ್ಚಿನ ಮಳೆ ಕೇವಲ ಬೆಂಗಳೂರಿಗೆ ಸೀಮಿತವಾಗಿಲ್ಲ. ತಮಿಳುನಾಡು, ಲಕ್ಷದ್ವೀಪ, ಕರ್ನಾಟಕದ ಉತ್ತರ ಹಾಗೂ ದಕ್ಷಿಣ ಒಳನಾಡುಗಳಲ್ಲೂ ವಾರದಿಂದ ಭಾರೀ ಮಳೆಯಾಗುತ್ತಿದೆ ಎಂದವರು ಹೇಳಿದ್ದಾರೆ.

### ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸರಸ್ವತಿ ಬಡಾವಣೆ 'ಎ' ಮತ್ತು 'ಬಿ' ಬ್ಲಾಕ್, ಜಯನಗರ 'ಎ', 'ಬಿ' ಮತ್ತು 'ಸಿ' ಬ್ಲಾಕ್ ಭೂಮಿಕ ನಗರ ಜೆ.ಎನ್. ಕಾನ್ವೆಂಟ್ ಕೆಎಸ್‌ಎಸ್ ಕಾಲೇಜ್ ಸುತ್ತಮುತ್ತ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಆರೋಗ್ಯವಾಗಿದ್ದರೆ ಅನ್ಯಾಯದ ವಿರುದ್ಧದ ಹೋರಾಟಕ್ಕೆ ಶಕ್ತಿ



**ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಮೂರ್ತಿ ರಾಜೇಶ್ವರಿ ಹೆಗಡೆ**

ದಾವಣಗೆರೆ, ಸೆ. 7 - ಜನರು ಉತ್ತಮ ಆರೋಗ್ಯದಿಂದ ಸದೃಢವಾಗಿದ್ದರೆ, ಮಾತ್ರ ಶೋಷಣೆ, ಅನ್ಯಾಯದ ವಿರುದ್ಧ ಹೋರಾಟ ಮಾಡುವ ಶಕ್ತಿ ಬರುತ್ತದೆ. ಸದೃಢ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್.ಹೆಗಡೆ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯ ತುಂಗಭದ್ರಾ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ ದಾವಣಗೆರೆ ತಾಲ್ಲೂಕು ಇವರ ಸಂಯುಕ್ತಾಶ್ರಯದಲ್ಲಿ ಇಂದು ಹಮ್ಮಿಕೊಂಡಿದ್ದ ಪ್ರಸಕ್ತ ಸಾಲಿನ 'ಪೋಷಣ್ ಮಾಸಾಚರಣೆ ಮತ್ತು ಮಾತೃವಂದನ ಸಪ್ತಾಹ' ಉದ್ಘಾಟನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತಾಯಂದಿರು ಮತ್ತು ಮಕ್ಕಳಿಬ್ಬರೂ ಶಕ್ತಿಯುತವಾಗಿರಬೇಕೆಂದರೆ ಪೌಷ್ಠಿಕ ಆಹಾರ ಒದಗಿಸಬೇಕು. ಗರ್ಭಿಣಿ ಮಹಿಳೆಯರಿಗೆ ಯಾವ ರೀತಿಯ ಆಹಾರ ನೀಡಬೇಕು ಎಂಬುದನ್ನು ಆರೋಗ್ಯ ಇಲಾಖೆಯ ತಜ್ಞ ವೈದ್ಯರೊಂದಿಗೆ ಚರ್ಚಿಸಿ ಸೂಕ್ತ ಆಹಾರ ಒದಗಿಸಬೇಕು ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯ್ಕ್ ಮಾತನಾಡಿ, ಗರ್ಭಿಣಿಯರ ಆರೋಗ್ಯಕ್ಕಾಗಿ ಆಯಾ ಭೌಗೋಳಿಕ ಪ್ರದೇಶಗಳಿಗೆ ತಕ್ಕಂತೆ ಆಹಾರ ಒದಗಿಸಲಾಗುತ್ತದೆ ಎಂದರು.

ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಗರ್ಭಿಣಿ ಮಹಿಳೆಯರು ಮತ್ತು ಅಪೌಷ್ಠಿಕತೆಯಿಂದ ಬಳಲುತ್ತಿರುವವರ ಸಬಲೀಕರಣಕ್ಕಾಗಿ ಸರ್ಕಾರ ಜಾರಿಗೆ ತರುತ್ತಿರುವ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಯಶಸ್ವಿಗೊಳಿಸಲು ಪ್ರಯತ್ನಿಸಬೇಕು ಎಂದು ಹೇಳಿದರು.

ಜಿಲ್ಲಾ ಆಯುಷ್ ಅಧಿಕಾರಿ ಶಂಕರಗೌಡ ಮಾತನಾಡಿ, ಮುಂದಿನ ದಿನಗಳಲ್ಲಿ ಜಿಲ್ಲೆಯ 12,000 ಬಾಣಂತಿಯರಿಗೆ ಆಯುರ್ವೇದ ಔಷಧಿ ನೀಡುವ ಮೂಲಕ ಅಪೌಷ್ಟಿಕತೆ ಹೋಗಲಾಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ವಾಸಂತಿ ಉಪ್ಪಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ಮಕ್ಕಳನ್ನು ಸದೃಢಗೊಳಿಸುವ ನಿಟ್ಟಿನಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಪೌಷ್ಠಿಕಾಂಶಗಳನ್ನು ಒಳಗೊಂಡ ಆಹಾರ ಒದಗಿಸಲಾಗುತ್ತಿದೆ. ಜೊತೆಗೆ ಸ್ಥಳೀಯವಾಗಿ ಅಂಗನವಾಡಿ ಕೇಂದ್ರಗಳ ಬಳಿ ಪೌಷ್ಠಿಕ ಆಹಾರ ಒದಗಿಸುವ ಸಸ್ಯಗಳ ಕೈತೋಟ ನಿರ್ಮಿಸುವ ಮೂಲಕ ಪೌಷ್ಠಿಕ ಆಹಾರ ತಯಾರಿಸಿ ಮಕ್ಕಳಿಗೆ ನೀಡಲಾಗುತ್ತಿದೆ ಎಂದು ಹೇಳಿದರು.

ಆರ್.ಸಿ.ಹೆಚ್.ಓ ಡಾ. ಮೀನಾಕ್ಷಿ ಅವರು ಆರೋಗ್ಯ ನೈರ್ಮಲ್ಯೀಕರಣ ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ನಾಗರಾಜ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಶ್ರೀಮತಿ ರೇಷ್ಮ ಕೌಸರ್, ಜಿಲ್ಲಾ ಅಂಗವಿಲಕರ ಸಬಲೀಕರಣಾಧಿಕಾರಿ ಡಾ.ಕೆ.ಕೆ ಪ್ರಕಾಶ್, ಸಾರ್ವಜನಿಕ ಶಿಕ್ಷಣ ಇಲಾಖೆಯ ಕುಮಾರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಪೂರ್ಣಿಮಾ ಮತ್ತಿತರರು ಉಪಸ್ಥಿತರಿದ್ದರು.

## ಕನಕ ವಿವಿಧೋದ್ದೇಶ ಸಂಘಕ್ಕೆ 14.30 ಲಕ್ಷ ಲಾಭಾಂಶ



ದಾವಣಗೆರೆ, ಸೆ.7- ಹದಡಿಯ ಕನಕ ವಿವಿಧೋದ್ದೇಶ ಸಂಘದ 2021-22ನೇ ಸಾಲಿನ 14ನೇ ವಾರ್ಷಿಕ ಮಹಾಸಭೆ ಸಂಘದ ಆವರಣದಲ್ಲಿ ಅಧ್ಯಕ್ಷರಾದ ಎ.ಹೆಚ್.ನಾಗರಾಜ್ ಅವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆಯಿತು.

ಸಂಘಕ್ಕೆ ಈ ಬಾರಿ 14.30 ಲಕ್ಷ ಲಾಭ ಬಂದಿದ್ದು, ವರ್ಷದಿಂದ ವರ್ಷಕ್ಕೆ ಪ್ರಗತಿ ಪಥದಲ್ಲಿ ನಡೆಯುತ್ತಿದೆ ಎಂದು ನಾಗರಾಜ್ ತಿಳಿಸಿದರು. ಅತಿಥಿಗಳಾಗಿ ಲೋಕೋಪಯೋಗಿ ನಿವೃತ್ತ ಇಂಜಿನಿಯರ್ ಎಂ.ಎನ್. ದಳವಾಯಿ, ಆರ್‌ಟಿಓ ಅಧೀಕ್ಷಕ ಹೆಚ್.ಸಿ. ಹನುಮಂತಪ್ಪ ಆಗಮಿಸಿದ್ದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಎಂ.ಆರ್ ಇಂದಿರಾ ದಳವಾಯಿ, ನಿರ್ದೇಶಕರುಗಳಾದ ಹೆಚ್.ಹೆಚ್. ಜಯ್ಯಣ್ಣ, ಹೆಚ್.ಎಂ. ನಿಂಗಪ್ಪ, ಎಸ್. ಲಕ್ಷ್ಮಣ್, ಟಿ.ಹೆಚ್. ಗುಡ್ಡಪ್ಪ, ಹೆಚ್.ಡಿ. ಹೊನ್ನಪ್ಪ, ಸಿ.ಎಂ.ಹನುಮಂತಪ್ಪ, ಎನ್. ಕುಬೇರಪ್ಪ, ವೈ. ಹನುಮಂತಪ್ಪ, ಕೆ.ಬಿ.ಮುರುಡಪ್ಪ, ಇಂದ್ರಮ್ಮ ಗಾಳೇರ, ಪಿ.ಕೆ. ರಮೇಶ್ ಪಿಸಾಳೆ, ಕಾರ್ಯದರ್ಶಿ ಎಲ್.ಯೋಗೀಶ್ ಮತ್ತು ಇತರರು ಉಪಸ್ಥಿತರಿದ್ದರು.

### ಬಿ. ಕಲಪನಹಳ್ಳಿ : ಇಂದು ಅನ್ನ ಸಂತರ್ಪಣೆ

ದಾವಣಗೆರೆ ತಾಲ್ಲೂಕು ಬಿ. ಕಲಪನಹಳ್ಳಿ ಗ್ರಾಮದ ಶ್ರೀ ಬಸವೇಶ್ವರ ಯುವಕ ಸಂಘದ ವತಿಯಿಂದ ಹಮ್ಮಿಕೊಂಡಿರುವ 7 ನೇ ವರ್ಷದ ಗಣೇಶೋತ್ಸವದ ಅಂಗವಾಗಿ ಇಂದು ಮಧ್ಯಾಹ್ನ 12ಕ್ಕೆ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಪ್ರಸಾದ ವಿನಿಯೋಗವಿದೆ. ನಾಳೆ ಶುಕ್ರವಾರ ಸಂಜೆ 6 ಗಂಟೆಗೆ ಗಣೇಶ ವಿಸರ್ಜನೆ ನಡೆಯಲಿದೆ.

### ನಗರದಲ್ಲಿ ಸಂಗೀತ ಕಾರ್ಯಕ್ರಮ

ಬಂಬೂಬಜಾರ್ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ ಹಾಗೂ ಮೇದಾರ ಗಿರಿಜನ ಅಭ್ಯುದಯ ಸೇವಾ ಸಂಘದ ವತಿಯಿಂದ ಹಮ್ಮಿಕೊಂಡಿರುವ 50 ನೇ ವರ್ಷದ ಶ್ರೀ ಗಣೇಶ ಸುವರ್ಣ ಮಹೋತ್ಸವದ ಅಂಗವಾಗಿ ದೇವಸ್ಥಾನದ ಆವರಣದಲ್ಲಿ ಇಂದು ಸಂಜೆ 6 ಕ್ಕೆ ಪ್ರತಿಭಾ ಪುರಸ್ಕಾರ ಮತ್ತು ತವರಿನ ಹೆಣ್ಣು ಮಕ್ಕಳಿಗೆ ಅರಿಶಿಣ-ಕುಂಕುಮ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮೇದಾರ ಸಮಾಜದ ಕಾರ್ಯದರ್ಶಿ ಕೆ. ಹನುಮಂತಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಖಜಾಂಚಿ ಯು. ಗಿರೀಶ್ ಅತಿಥಿಯಾಗಿ ಪಾಲ್ಗೊಳ್ಳಲಿದ್ದು, ಶ್ರೀಮತಿ ವೀಣಾ ಪ್ರಸಾದ್ ಇವರ ಗಾನಬಿಂಧು ಸಂಗೀತ ಧಾಮ ಶಾಲಾ ಮಕ್ಕಳಿಂದ ಸಂಗೀತ ರಸಮಂಜರಿ ಕಾರ್ಯಕ್ರಮ ಆಯೋಜಿಸಲಾಗಿದೆ.

### ಇಂದು ನೀರು ಸರಬರಾಜು ವ್ಯತ್ಯಯ

ಮಹಾನಗರ ಪಾಲಿಕೆಯ ಸಮಗ್ರ ನೀರು ಸರಬರಾಜು ವಿಭಾಗದ ಬಾತಿ ನೀರು ಶುದ್ಧೀಕರಣ ಕೇಂದ್ರದಲ್ಲಿ ಕೆಯುಐಡಿಎಫ್‌ಸಿ ವತಿಯಿಂದ ಪ್ರಗತಿ ಹಂತದಲ್ಲಿರುವ 24 x 7 ಜಲಸಿರಿ ಯೋಜನೆಗೆ ಸಂಬಂಧಿಸಿದ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಿದ್ದು, ಪ್ರಯುಕ್ತ ಇಂದು ಬಾತಿ ಕೇಂದ್ರದಿಂದ ದಾವಣಗೆರೆ ನಗರಕ್ಕೆ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಆಯುಕ್ತ ವಿಶ್ವನಾಥ ಪಿ. ಮುದಜ್ಜಿ ತಿಳಿಸಿದ್ದಾರೆ.

## ಭಾರತ್ ಜೋಡೋ ಸದ್ಭಾವನಾ ಯಾತ್ರೆಗೆ ಜಿಲ್ಲಾ ಕಾಂಗ್ರೆಸ್ ಬೆಂಬಲ



ದಾವಣಗೆರೆ, ಸೆ. 7 - ಜಿಲ್ಲಾ ಕಾಂಗ್ರೆಸ್ ವತಿಯಿಂದ ರಾಹುಲ್ ಗಾಂಧಿ ನಡೆಸುತ್ತಿರುವ ಭಾರತ್ ಜೋಡೋ ಸದ್ಭಾವನಾ ಯಾತ್ರೆಗೆ ಬೆಂಬಲಿಸಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ ಮಂಜಪ್ಪನವರ ನೇತೃತ್ವದಲ್ಲಿ ನಗರದ ಅಮರ್ ಜವಾನ್ ಸರ್ಕಲ್ ನಿಂದ ಸದ್ಭಾವನಾ ಯಾತ್ರೆಯನ್ನು ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧ್ಯಕ್ಷ ಎಚ್.ಬಿ ಮಂಜಪ್ಪ, ರಾಹುಲ್ ಗಾಂಧಿಯವರು ನಡೆಸುತ್ತಿರುವ ಐತಿಹಾಸಿಕ ಯಾತ್ರೆ ಯಶಸ್ವಿಯಾಗಲಿ ಹಾಗೂ ದೇಶದ ಪ್ರತಿಯೊಬ್ಬ ನಾಗರಿಕರು ಈ ಯಾತ್ರೆಗೆ ಬೆಂಬಲಿಸಲಿ ಎಂದು ಕರೆ ನೀಡಿದರು.

ಯಾತ್ರೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್.ಕೆ ಶೆಟ್ಟಿ, ಎಸ್. ಮಲ್ಲಿಕಾರ್ಜುನ್, ಬ್ಲಾಕ್ ಅಧ್ಯಕ್ಷ ಕೆ.ಜಿ ಶಿವಕುಮಾರ್, ವಿಪಕ್ಷ ನಾಯಕ ಗಡಿಗುಡಾಳ್ ಮಂಜುನಾಥ್, ಪಾಲಿಕೆ ಸದಸ್ಯ ಎ. ನಾಗರಾಜ್, ಮುಖಂಡರಾದ ಸೈಯದ್ ಸೈಫುಲ್ಲಾ, ಪ್ರಕಾಶ್ ಪಾಟೀಲ್, ನಂಜನಾಯಕ್, ಸುಭಾನ್ ಸಾಬ್, ಅಲಿ ರೆಹಮತ, ಮಂಜಣ್ಣ, ಹರೀಶ್ ಕೆ.ಎಲ್, ಎಸ್.ಎಂ. ರುದ್ರೇಶ್, ಸಾಗರ್ ಎಂ ಎಚ್, ಮೊಹಮ್ಮದ್ ಜಿಕ್ರೀಯ, ನವೀನ್ ನಲ್ವಾಡಿ, ಭಾಷಾ, ಜಾನ್, ರುದ್ರಮುನಿ, ಮಂಜು ನಾಥ್, ಸಮಿ, ಸೇರಿದಂತೆ ಅನೇಕರು ಯಾತ್ರೆಯಲ್ಲಿ ಪಾಲ್ಗೊಂಡು ಭಾರತ್ ಮಾತಾ ಕಿ ಜೈ, ಮಹಾತ್ಮ ಗಾಂಧಿ ಕಿ ಜೈ ಎನ್ನುವ ಘೋಷಣೆಯೊಂದಿಗೆ ಶಾಂತಿಯುತ ಯಾತ್ರೆ ನಡೆಸಿದರು.

### ನಗರದ ಕನ್ನಡ ಭವನದಲ್ಲಿ ಇಂದು ಸಾಂಸ್ಕೃತಿಕ ಸಂಭ್ರಮ, ನಾಟಕ ಪ್ರದರ್ಶನ

ಶ್ರೀ ಗುರು ವಾದ್ಯವೃಂದದ ವತಿಯಿಂದ ಇಂದು ಸಂಜೆ 6.30 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ಸಾಂಸ್ಕೃತಿಕ ಸಂಭ್ರಮ ಹಾಗೂ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ.

ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಎಸ್.ಎ. ರವೀಂದ್ರನಾಥ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳು : ಹೆಚ್.ಎಸ್. ಶಿವಶಂಕರ್, ಡಾ. ಎಂ.ಜಿ. ಈಶ್ವರಪ್ಪ, ದಿನೇಶ್ ಕೆ. ಶೆಟ್ಟಿ, ಎ. ನಾಗರಾಜ್, ಡಾ.ಹೆಚ್.ಎಸ್. ಮಂಜುನಾಥ್ ಕುರ್ಕಿ, ರವಿಚಂದ್ರ, ಹೆಚ್. ಅನ್ನಪೂರ್ಣ, ಜಗದೀಶ್, ಬಿ.ಕೆ. ಗಣೇಶ್, ಕೆ.ಎನ್. ಗಜೇಂದ್ರಪ್ಪ. ಸನ್ಮಾನ : ಸಿಪಿಐ ಗುರುಬಸವರಾಜ್ ಹಾಗೂ ಲಕ್ಷ್ಮಿ ದೇವಮ್ಮ, ಸಂಗೀತ ಇವರಿಂದ ನೃತ್ಯ ಪ್ರದರ್ಶನ, ಪ್ರಭುಶಂಕರ್ ಮತ್ತು ತಂಡದವರಿಂದ ಸುಗಮ ಸಂಗೀತ ಹಾಗೂ 'ಸಾಧ್ವಿ ಸರಸ್ವತಿ' ನಾಟಕ ಪ್ರದರ್ಶನಗೊಳ್ಳಲಿದೆ.

## ಮೇರಿಯಮ್ಮ ಜಾತ್ರೆ, ಗಣೇಶ ವಿಸರ್ಜನೆಗೆ ಎಚ್ಚರಿಕೆಗೆ ಸೂಚನೆ



ಹರಿಹರ, ಸೆ.7- ನಾಳೆ ದಿನಾಂಕ 8 ರಂದು ನಡೆಯಲಿರುವ ಮಾತೆ ಮೇರಿಯಮ್ಮನವರ ಜಾತ್ರೆ ಹಾಗೂ ಗಣೇಶ ಮೂರ್ತಿ ವಿಸರ್ಜನೆಯ ಹಿನ್ನೆಲೆಯಲ್ಲಿ ಸಿಪಿಐ ಸತೀಶ್ ಕುಮಾರ್, ಪಿಎಸ್ಐ ಶಂಕರ್ ಗೌಡ್ರು ಪಾಟೀಲ್ ನೇತೃತ್ವದಲ್ಲಿ ಮುಂಜಾಗ್ರತಾ ಕ್ರಮವನ್ನು ಕೈಗೊಳ್ಳಲು ನಗರ ಪೊಲೀಸ್ ಠಾಣೆಯ ಆವರಣದಲ್ಲಿ ಸಿಬ್ಬಂದಿಗಳ ಸಭೆ ಇಂದು ನಡೆಯಿತು.

ಈ ಸಂದರ್ಭದಲ್ಲಿ ಗುತ್ತೂರು ಗ್ರಾಮಾಂತರ ಠಾಣೆಯ ಪಿಎಸ್ಐ ಅರವಿಂದ್, ಮಲೆಬೆನ್ನೂರು ಠಾಣೆಯ ಪಿಎಸ್ಐ ಡಿ. ರವಿಕುಮಾರ್, ಕ್ರೈಮ್ ಪಿಎಸ್ಐ ಚಿದಾನಂದ, ದಾವಣಗೆರೆ ಟ್ರಾಫಿಕ್ ಪಿಎಸ್ಐ ಶೈಲಾಶ್ರೀ ಹಾಗೂ ಪೊಲೀಸ್ ಸಿಬ್ಬಂದಿಗಳು ಹಾಜರಿದ್ದರು.

### ಈಡಿಗರ ವಿದ್ಯಾರ್ಥಿಗಳಿಗೆ ಪುರಸ್ಕಾರ

ದಾವಣಗೆರೆ, ಸೆ.7- ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿಯ ಪರೀಕ್ಷೆಗಳಲ್ಲಿ ಶೇ. 70 ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆದಿರುವ ಆರ್ಯ ಈಡಿಗರ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಜಿಲ್ಲಾ ಸಂಘದ ವತಿಯಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಕೆ. ಶಂಕರ್ ತಿಳಿಸಿದ್ದಾರೆ.

ಆಸಕ್ತ ವಿದ್ಯಾರ್ಥಿಗಳು ಸ್ಥಳೀಯ ವಿನೋಬನಗರದಲ್ಲಿರುವ ಆರ್ಯ ಈಡಿಗರ ಹಾಸ್ಟೆಲ್‌ನಲ್ಲಿ ಅಥವಾ ತಮ್ಮ ತಾಲ್ಲೂಕಿನ ಸಂಘಗಳಲ್ಲಿ, ಜಿಲ್ಲಾ ನಿರ್ದೇಶಕರಲ್ಲಿ ಅರ್ಜಿ ಪಡೆದುಕೊಂಡು ಅಂಕಪಟ್ಟಿ ಮತ್ತಿತರೆ ಸೂಕ್ತ ದಾಖಲೆಗಳೊಂದಿಗೆ ಇದೇ ದಿನಾಂಕ 20 ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಕಾರ್ಯದರ್ಶಿ ಎ.ನಾಗರಾಜ್ ತಿಳಿಸಿದ್ದಾರೆ.

# ವಾರದಿಂದ ಆಗುತ್ತಿರುವ ನಷ್ಟದ ಬಗ್ಗೆ ಪೂರಕ ವರದಿಗೆ ನಿರ್ಧಾರ

**ನೆರೆ ನಷ್ಟದ ಬಗ್ಗೆ ನಿಖರ ಅಂದಾಜು ಪಟ್ಟಿ**

**ಕೇಂದ್ರದ ತಂಡಕ್ಕೆ ರಾಜ್ಯದಿಂದ ವರದಿ ಸಲ್ಲಿಕೆ**

ಬೆಂಗಳೂರು, ಸೆ. 7 - ರಾಜ್ಯ ಸರ್ಕಾರವು ಅತ್ಯಂತ ನಿಖರವಾಗಿ ಹಾಗೂ ಪಾರದರ್ಶಕವಾಗಿ ಹಾನಿಯ ಅಂದಾಜುಪಟ್ಟಿ ಸಿದ್ಧಪಡಿಸಿ, ಪ್ರಸ್ತಾವನೆ ಸಲ್ಲಿಸಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ನ್ಯಾಯಯುತ ಪರಿಹಾರ ಒದಗಿಸಲು ಶಿಫಾರಸ್ಸು ಮಾಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಿಳಿಸಿದರು.

ಅವರು ರಾಜ್ಯದ ಪ್ರವಾಹ ಪರಿಸ್ಥಿತಿ ಅಧ್ಯಯನಕ್ಕೆ ಆಗಮಿಸಿರುವ ಕೇಂದ್ರ ಸರ್ಕಾರದ ಗೃಹ ಸಚಿವಾಲಯದ ಜಂಟಿ ಕಾರ್ಯದರ್ಶಿ ಆಶಿಶ್ ಕುಮಾರ್ ನೇತೃತ್ವದ ಕೇಂದ್ರ ಅಧ್ಯಯನ ತಂಡದೊಂದಿಗೆ ಸಭೆ ನಡೆಸಿ, ರಾಜ್ಯದಲ್ಲಿ ಪ್ರವಾಹದಿಂದ ಜುಲೈ, ಆಗಸ್ಟ್ ಹಾಗೂ ಈ ತಿಂಗಳು ಸಂಭವಿಸಿದ ಹಾನಿಯ ಕುರಿತು ಚರ್ಚಿಸಿದರು.

ರಾಜ್ಯದಲ್ಲಿ ಜುಲೈ ಹಾಗೂ ಆಗಸ್ಟ್ ತಿಂಗಳಲ್ಲಿ ಪ್ರವಾಹ ಪರಿಸ್ಥಿತಿಯಿಂದ ಸಂಭವಿಸಿದ ಹಾನಿಯ ಕುರಿತು ಹಾಗೂ ರಾಜ್ಯ ಸರ್ಕಾರ ಕೈಗೊಂಡ ಪರಿಹಾರ ಕ್ರಮಗಳ ಕುರಿತು ಸಭೆಯಲ್ಲಿ ವಿವರವಾದ ಮಾಹಿತಿ ಒದಗಿಸಲಾಯಿತು.

ತಂಡವು ಚಿತ್ರದುರ್ಗ, ಹಾಸನ, ಚಿಕ್ಕಮಗಳೂರು, ಹಾವೇರಿ, ಧಾರವಾಡ, ಗದಗ, ಬೀದರ್, ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಿಗೆ ಭೇಟಿ ನೀಡುವ ಕಾರ್ಯಕ್ರಮ ರೂಪಿಸಲಾಗಿತ್ತು. ಇದರೊಂದಿಗೆ ಅತಿ ಹೆಚ್ಚು ಭೂಕುಸಿತ, ಸಮುದ್ರ ಕೊರೆತ ಸಂಭವಿಸಿರುವ ಕೊಡಗು, ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಗೂ ಭೇಟಿ ನೀಡುವಂತೆ ಮುಖ್ಯಮಂತ್ರಿಗಳು ಸಲಹೆ ನೀಡಿದರು. ಜೊತೆಗೆ ಬೆಂಗಳೂರು ನಗರ, ನೆರೆಯ ಮಂಡ್ಯ, ರಾಮನಗರ ಜಿಲ್ಲೆಗಳ ಪ್ರವಾಹ ಪರಿಸ್ಥಿತಿಯನ್ನೂ ಸಹ ಅವಲೋಕಿಸುವಂತೆ ತಿಳಿಸಲಾಯಿತು.

ಭಾರೀ ಸಂಖ್ಯೆಯಲ್ಲಿ ಮೀನುಗಾರಿಕಾ ದೋಣಿಗಳಿಗೆ, ಅಂಗಡಿ ಮುಂಗಟ್ಟುಗಳಿಗೆ ಸಂಭವಿಸಿದ ಹಾನಿ ಹಾಗೂ ರಾಮನಗರದ ರೇಷ್ಮೆ ರೀಲಿಂಗ್ ಘಟಕ ಹಾಗೂ ಟ್ವಿಸ್ಟಿಂಗ್ ಘಟಕಗಳಿಗೆ ಸಂಭವಿಸಿದ ಹಾನಿಯ ಕುರಿತೂ ಸಹ ಕೇಂದ್ರ ತಂಡದ ಗಮನಕ್ಕೆ ತಂದ ಮುಖ್ಯಮಂತ್ರಿಗಳು, ಮೊದಲ ಬಾರಿಗೆ ಇಂತಹ ಹಾನಿ ಸಂಭವಿಸಿದ್ದು, ಅವರಿಗೆ ಜೀವನೋಪಾಯಕ್ಕೆ ತೊಂದರೆಯಾಗಿದೆ. ಆದ್ದರಿಂದ ಮಾನವೀಯ ದೃಷ್ಟಿಯಿಂದ ಅವರಿಗೆ ನೆರವು ನೀಡಲು ಪರಿಶೀಲಿಸುವಂತೆ ಕೋರಿದರು.

ರಾಜ್ಯವು 330 ಕಿ.ಮೀ. ಕರಾವಳಿ ಪ್ರದೇಶವನ್ನು ಹೊಂದಿದ್ದು, ಸಮುದ್ರ ಕೊರೆತ ತಡೆಗಟ್ಟಲು ಹಲವು ಸೂಕ್ಷ್ಮ ಪ್ರದೇಶಗಳಲ್ಲಿ 350 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಆದರೆ ಹೊಸ ಜಾಗಗಳಲ್ಲಿ ಕಡಲಕೊರೆತ ಉಂಟಾಗಿದ್ದು, ರಾಜ್ಯದ ಸಂಪೂರ್ಣ ಕರಾವಳಿ ಪ್ರದೇಶದ ರಕ್ಷಣೆಗೆ ಕೇಂದ್ರದ ನೆರವಿನ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಉತ್ತರ ಕರ್ನಾಟಕ ಭಾಗದಲ್ಲಿಯೂ ಹಿಂದೆ ಪ್ರವಾಹ ಕಾಣಿಸಿಕೊಳ್ಳದ ಕಲಬುರಗಿ, ಗದಗ, ಬೀದರ್, ಕೊಪ್ಪಳ ಮೊದಲಾದ ಜಿಲ್ಲೆಗಳಲ್ಲಿ ಈ ಬಾರಿ ಪ್ರವಾಹ ಉಂಟಾಗಿದೆ.

ಕಳೆದ ನವೆಂಬರ್ ತಿಂಗಳಿನಿಂದ ಬಿಟ್ಟು ಬಿಟ್ಟು ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ ಮಳೆಯ ಮಾದರಿಯನ್ನು ಅಧ್ಯಯನ ನಡೆಸುವ ಅಗತ್ಯವಿದೆ. ಸತತ ಮಳೆಯಿಂದಾಗಿ ರಾಜ್ಯದ ಬಹುತೇಕ ಕೆರೆ ಕಟ್ಟೆಗಳು ತುಂಬಿ ಹರಿಯುತ್ತಿವೆ. ಇದರಿಂದಾಗಿ ಕೆರೆ ತುಂಬಿ ಹಾಗೂ ಕೆರೆ ಏರಿ ಒಡೆದು ಪ್ರವಾಹ ಉಂಟಾಗುತ್ತಿದೆ. ನದಿ ಪ್ರವಾಹಕ್ಕಿಂತ ಭಿನ್ನ ಪರಿಸ್ಥಿತಿ ಇದಾಗಿದೆ ಎಂದು ಮುಖ್ಯಮಂತ್ರಿಗಳು ಅಭಿಪ್ರಾಯಪಟ್ಟರು.

ರಾಜ್ಯದಲ್ಲಿ ಕಳೆದ ನವೆಂಬರ್ ನಿಂದೀಚೆಗೆ ಮೂಲಸೌಕರ್ಯಗಳ ದುರಸ್ತಿಗೆ ಎರಡು ಬಾರಿ 500 ಕೋಟಿ ರೂ.ಗಳಂತೆ ಹಾಗೂ ಎರಡು ದಿನಗಳ ಹಿಂದೆ 600 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗಿದೆ. ಬೆಳೆ ಹಾನಿಗೆ ರಾಜ್ಯ ಸರ್ಕಾರ ಹೆಚ್ಚುವರಿ ಪರಿಹಾರ ನೀಡುತ್ತಿದ್ದು, 18.58 ಲಕ್ಷ ರೈತರಿಗೆ ಒಟ್ಟು 2452 ಕೋಟಿ ರೂ. ಪರಿಹಾರ ವಿತರಿಸಲಾಗಿದೆ. ಇದರಲ್ಲಿ 1160 ಕೋಟಿ ರೂ. ಹೆಚ್ಚುವರಿ ಮೊತ್ತವನ್ನು ರಾಜ್ಯ ಸರ್ಕಾರದ ಬೊಕ್ಕಸದಿಂದ ಭರಿಸಲಾಗಿದೆ. ಮನೆ ಹಾನಿಗೂ ನಷ್ಟದ ಪ್ರಮಾಣವನ್ನು ಆಧರಿಸಿ, ಪರಿಹಾರ ವಿತರಿಸಲಾಗುತ್ತಿದೆ. ಈ ಎಲ್ಲ ಪರಿಹಾರಗಳನ್ನೂ ಅತ್ಯಂತ ತ್ವರಿತವಾಗಿ, ಪಾರದರ್ಶಕವಾಗಿ ನೇರವಾಗಿ ಸಂತ್ರಸ್ತರ ಖಾತೆಗೆ ಜಮಾ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಕಳೆದ ಒಂದು ವಾರದಿಂದೀಚೆಗೆ ಪುನಃ ಭಾರೀ ಮಳೆಯಾಗುತ್ತಿದ್ದು ಬೆಂಗಳೂರು, ರಾಮನಗರ, ಮಂಡ್ಯ ಮತ್ತಿತರೆ ಜಿಲ್ಲೆಗಳಲ್ಲಿ ಬಹಳಷ್ಟು ಹಾನಿಯಾಗಿದೆ. ಈ ಅವಧಿಯಲ್ಲಿ ಸಂಭವಿಸಿದ ನಷ್ಟದ ಕುರಿತು ಪೂರಕ ಪ್ರಸ್ತಾವನೆಯನ್ನು ಸಹ ಕೂಡಲೇ ಸಲ್ಲಿಸಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಕೇಂದ್ರ ಗೃಹ ಸಚಿವಾಲಯದ ಜಂಟಿ ಕಾರ್ಯದರ್ಶಿ ಆಶೀಶ್ ಕುಮಾರ್ ನೇತೃತ್ವದ ತಂಡವು ಕೇಂದ್ರ ಹಣಕಾಸು ಇಲಾಖೆಯ ಉಪಕಾರ್ಯದರ್ಶಿ ಮಹೇಶ್ ಕುಮಾರ್, ಇಂಧನ ಇಲಾಖೆಯ ಸಹಾಯಕ ನಿರ್ದೇಶಕರಾದ ಭಾವ್ಯ ಪಾಂಡೆ, ಜಲಶಕ್ತಿ ಸಚಿವಾಲಯದ ಅಶೋಕ್ ಕುಮಾರ್, ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಅಧೀಕ್ಷಕ ಅಭಿಯಂತರ ವಿ.ವಿ.ಶಾಸ್ತ್ರಿ, ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ಡಾ. ಕೆ. ಮನೋಹರನ್, ಗ್ರಾಮೀಣಾಭಿವೃದ್ಧಿ ಸಚಿವಾಲಯದ ಅಧೀನ ಕಾರ್ಯದರ್ಶಿ ಎಸ್.ಬಿ. ತಿವಾರಿ ಅವರನ್ನು ಒಳಗೊಂಡಿದೆ.


**WANTED**

1) SALESMAN – 3 NO.S
(EXPRERIENCED IN ANY MARKETING FIELD)
2) ACCOUNTANT (LADIES OR GENTS)
3) OFFICE SALESMAN – 2 NO.S
(INSHOP MARKETING)
4) OFFICE BOYS – 2 NO.S
5) WATCHMAN – 1 NO.S

**SAMYAK CERAMICS**
# 646/3P, HADADI ROAD, NEAR UDAY SUPER BAZAR, DAVANGERE-577005.
PHONE : 98803 66119

# ಜಿಲ್ಲೆಯಲ್ಲಿ ಅತಿವೃಷ್ಟಿ, ಅಂತರ್ಜಲವೂ ವೃದ್ಧಿ

ದಾವಣಗೆರೆ, ಸೆ. 7 - ಜಿಲ್ಲೆಯಲ್ಲಿ ವಾಡಿಕೆಗಿಂತ ಎರಡು ಪಟ್ಟು ಮಳೆಯಾಗಿರುವುದು ಅಂತರ್ಜಲ ಪ್ರಮಾಣದಲ್ಲಿ ಭಾರೀ ಏರಿಕೆ ತಂದಿದೆ.

ಕಳೆದ 2021ರ ಆಗಸ್ಟ್ ತಿಂಗಳಲ್ಲಿ ಜಿಲ್ಲೆಯ ಅಂತರ್ಜಲ ಮಟ್ಟ 6.71 ಮೀಟರ್ ಆಗಿತ್ತು. ಅದು ಈ ವರ್ಷದ ಆಗಸ್ಟ್‌ನಲ್ಲಿ 4.17 ಮೀಟರ್‌ಗೆ ಏರಿಕೆಯಾಗಿದೆ. 2017ರ ಆಗಸ್ಟ್ ಮಾಹೆಯಲ್ಲಿ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ 15.88 ಮೀಟರ್‌ಗಳವರೆಗೆ ಕಡಿಮೆ ಇತ್ತು.

2020ರ ನಂತರದಿಂದ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ ನಿರಂತರವಾಗಿ ಉತ್ತಮವಾಗಿದೆ. ಮಳೆಯ ಜೊತೆಗೆ ಮೇಲ್ಮೈ ನೀರಿನ ಬಳಕೆ ಹೆಚ್ಚಾಗಿರುವುದೇ ಅಂತರ್ಜಲ ಸುಧಾರಣೆಗೆ ಕಾರಣವಾಗಿದೆ.

ಜಿಲ್ಲೆಯಲ್ಲಿ ಸೆ.6ರವರೆಗೆ ವಾಡಿಕೆ ಮಳೆ ಪ್ರಮಾಣ 286.5 ಮಿ.ಮೀ. ಆಗಿದೆ. ಆದರೆ, ವಾಸ್ತವಿಕವಾಗಿ 582.2 ಮಿ.ಮೀ. ಮಳೆಯಾಗಿದೆ. ಒಟ್ಟಾರೆ ಶೇ.103ರಷ್ಟು ಹೆಚ್ಚಿನ ಮಳೆಯಾಗಿದೆ.

ಈ ಹಿನ್ನೆಲೆಯಲ್ಲಿ ಜಿಲ್ಲಾದ್ಯಂತ ಅಂತರ್ಜಲದ ಪ್ರಮಾಣದಲ್ಲಿ ಏರಿಕೆಯಾಗಿದೆ. ಜಗಳೂರು ಹೊರತು ಪಡಿಸಿದರೆ ಉಳಿದ ಎಲ್ಲ ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ಒಂದಂಕಿಯ ಮಟ್ಟದಲ್ಲಿದೆ. ಜಗಳೂರಿನಲ್ಲಿ ಮಾತ್ರ ಕಳೆದ ಆಗಸ್ಟ್ ಅಂತ್ಯದ ವೇಳೆಗೆ ಅಂತರ್ಜಲ ಮಟ್ಟ 12.78 ಮೀಟರ್ ಆಗಿದೆ.

ಈ ಬಗ್ಗೆ ವಿವರ ನೀಡಿರುವ ಅಂತರ್ಜಲ ಅಭಿವೃದ್ಧಿ ಇಲಾಖೆಯ ಅಂತರ್ಜಲ ನಿರ್ದೇಶನಾಲಯದ ಹಿರಿಯ ಭೂ ವಿಜ್ಞಾನಿ ಆರ್. ಬಸವರಾಜ್, ಈ ವರ್ಷ ಜಗಳೂರು ಹೊರತು ಪಡಿಸಿದರೆ ಜಿಲ್ಲೆಯ ಉಳಿದ ತಾಲ್ಲೂಕುಗಳಲ್ಲಿ ಧಾರಾಕಾರ ಮಳೆಯಾಗಿದೆ. ಇದು ಅಂತರ್ಜಲ ಮಟ್ಟ ಹೆಚ್ಚಾಗಲು ಕಾರಣವಾಗಿದೆ ಎಂದಿದ್ದಾರೆ. ಜಗಳೂರಿನಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆಯಾಗಿದೆ. ಆದರೆ, ಜಗಳೂರಿನಲ್ಲಿ ವಾಡಿಕೆಯ ಮಳೆ ಪ್ರಮಾಣವೇ ಕಡಿಮೆ. ಹೀಗಾಗಿ ಅಲ್ಲಿ ಅಂತರ್ಜಲ ಪ್ರಮಾಣ ತೀರಾ ಹೆಚ್ಚುವ ಪರಿಸ್ಥಿತಿ ಕಂಡು ಬಂದಿಲ್ಲ.



**ಜಿಲ್ಲೆಯ ಅಂತರ್ಜಲ ಮಟ್ಟ 6.71 ಮೀಟರ್‌ಗಳಿಂದ 4.17 ಮೀಟರ್‌ಗೆ ಏರಿಕೆ**

ಪ್ರಸಕ್ತ ಮುಂಗಾರಿನಲ್ಲಿ ಜೂನ್ 1ರಿಂದ ಸೆಪ್ಟೆಂಬರ್ 2ರವರೆಗೆ ಚನ್ನಗಿರಿ ತಾಲ್ಲೂಕಿನಲ್ಲಿ 650.3 ಮಿ.ಮೀ., ದಾವಣಗೆರೆ ತಾಲ್ಲೂಕಿನಲ್ಲಿ 521.6 ಮಿ.ಮೀ., ಹರಿಹರದಲ್ಲಿ 492.5 ಮಿ.ಮೀ., ಹೊನ್ನಾಳಿಯಲ್ಲಿ 675.4 ಮಿ.ಮೀ., ನ್ಯಾಮತಿಯಲ್ಲಿ 719.4. ಮಿ.ಮೀ. ಹಾಗೂ ಜಗಳೂರಿನಲ್ಲಿ 316.1 ಮಿ.ಮೀ. ಮಳೆಯಾಗಿದೆ.

ಮಳೆ ಹೆಚ್ಚಾಗಿ ಈಗಾಗಲೇ ಜಮೀನುಗಳಲ್ಲಿ ತನಸಿ ಇದೆ. ಹೀಗಾಗಿ ಕನಿಷ್ಠ ಮುಂದಿನ ಒಂದೆರಡು ತಿಂಗಳಾದರೂ ರೈತರಿಗೆ ಅಂತರ್ಜಲ ಬಳಕೆಯಾಗುವ ಸಾಧ್ಯತೆ ಕಡಿಮೆ. ಹೀಗಾಗಿ ನವೆಂಬರ್ ತಿಂಗಳವರೆಗಾದರೂ ಅಂತರ್ಜಲ ಮಟ್ಟ ಹೆಚ್ಚಿನ ಹಂತದಲ್ಲೇ ಮುಂದುವರೆಯಲಿದೆ ಎಂದು ಬಸವರಾಜ್ ಹೇಳಿದ್ದಾರೆ. ಜಿಲ್ಲೆಯಲ್ಲಿ ಒಟ್ಟಾರೆ 76 ಅಂತರ್ಜಲ ಮಾಪನ ಘಟಕಗಳನ್ನು ಅಳವಡಿಕೆ ಮಾಡಲಾಗಿದೆ. ಇವುಗಳಲ್ಲಿ ಡಿಜಿಟಲ್ ವಾಟರ್ ಲೆವೆಲ್ ರಿಕಾರ್ಡರ್ (ಡಿ.ಡಬ್ಲ್ಯೂ.ಎಲ್.ಆರ್.) ಅಳವಡಿಸಲಾಗಿದೆ. ಈ ಮಾಪನ ಕೇಂದ್ರಗಳಿಂದ ಸ್ವಯಂ ಚಾಲಿತವಾಗಿ ಅಂತರ್ಜಲದ ಮಾಹಿತಿ ಲಭ್ಯವಾಗುತ್ತಿದೆ ಎಂದವರು ತಿಳಿಸಿದ್ದಾರೆ.

ಜಿಲ್ಲೆಯ ಹಲವು ಕಡೆ ಅಂತರ್ಜಲದ ಪ್ರಮಾಣ ಹೆಚ್ಚಾಗಿದ್ದು, ಕೆಲವು ಕಡೆಗಳಲ್ಲಂತೂ ಅಂತರ್ಜಲ ಮಟ್ಟ 1 ಮೀಟರ್‌ಗೂ ಕಡಿಮೆ ಅಂತರದಲ್ಲೇ ಲಭ್ಯವಾಗುತ್ತಿದೆ. ಚನ್ನಗಿರಿಯ ಕೆಲವು ಗ್ರಾಮಗಳಲ್ಲಿ ಬೋರ್‌ಗಳು ಆನ್ ಮಾಡದೇ ಇದ್ದರೂ ನೀರು ಉಕ್ಕಿ ಹೊಲಗಳಲ್ಲಿ ಹರಿಯುತ್ತಿದೆ. ನೀರಿನ ಸೆಲೆ ಹೆಚ್ಚಾದಾಗ ಈ ರೀತಿ ಪರಿಸ್ಥಿತಿ ಉಂಟಾಗುತ್ತದೆ ಎಂದು ಬಸವರಾಜ್ ಹೇಳಿದ್ದಾರೆ.

ಅಂತರ್ಜಲ ಹೆಚ್ಚಾಗುವುದರಿಂದ ಫ್ಲೋರೈಡ್ ಪ್ರಮಾಣ ಕಡಿಮೆಯಾಗುತ್ತದೆ. ಆಳವಾದ ಬೋರ್‌ಗಳನ್ನು ಕೊರೆದ ಸಂದರ್ಭದಲ್ಲಿ ಫ್ಲೋರೈಡ್ ಮತ್ತಿತರೆ ಲೋಹಗಳ ಅಂಶ ಹೆಚ್ಚಾಗುತ್ತದೆ. ಇದು ಆರೋಗ್ಯಕ್ಕೆ ಹಾನಿಕರ. ಅಂತರ್ಜಲ ಹೆಚ್ಚಳವಾಗುವುದರಿಂದ ಈ ಸಮಸ್ಯೆ ನಿವಾರಣೆಯಾಗುತ್ತದೆ ಎಂದೂ ಅವರು ಹೇಳಿದ್ದಾರೆ.

**ಆಗಸ್ಟ್‌ನಲ್ಲಿ ಅಂತರ್ಜಲ (ಮೀಟರ್‌ಗಳಲ್ಲಿ)**

| | 2021 | 2022 |
|---|---|---|
| ದಾವಣಗೆರೆ | 5.92 | 3.92 |
| ಹರಿಹರ | 3.17 | 2.18 |
| ಚನ್ನಗಿರಿ | 4.95 | 2.51 |
| ಹೊನ್ನಾಳಿ | 1.56 | 1.86 |
| ನ್ಯಾಮತಿ | 6.93 | 2.17 |
| ಜಗಳೂರು | 17.78 | 12.78 |

# ನಗರದಲ್ಲಿ ವಿಜೃಂಭಣೆಯ ಕಾಶಿ ಜಗದ್ಗುರುಗಳ ಅಡ್ಡಪಲ್ಲಕ್ಕಿ

ದಾವಣಗೆರೆ, ಸೆ. 6- ಕಾಶೀ ಪೀಠದ ಜಗದ್ಗುರು ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಭಗವತ್ಪಾದರ ಅಡ್ಡಪಲ್ಲಕ್ಕಿ ಮಹೋತ್ಸವ ನಗರದಲ್ಲಿ ಬುಧವಾರ ವಿಜೃಂಭಣೆಯಿಂದ ನೆರವೇರಿತು.

ಇಲ್ಲಿನ ಶ್ರೀಶೈಲ ಮಠದಿಂದ ಅಡ್ಡಪಲ್ಲಕ್ಕಿ ಉತ್ಸವ ಆರಂಭಗೊಂಡು ಪಿಬಿ ರಸ್ತೆ ಸೇರಿ ನಗರದ ವಿವಿಧ ಬೀದಿಗಳ ಮೂಲಕ ಸಾಗಿತು. ಪುಷ್ಪಾಲಂಕೃತ ಪಲ್ಲಕ್ಕಿಯಲ್ಲಿ ಆಸೀನರಾಗಿದ್ದ ಜಗದ್ಗುರುಗಳು ಭಕ್ತರಿಗೆ ಆಶೀರ್ವದಿಸಿದರು.

ಶ್ರೀಶೈಲ ಜಗದ್ಗುರು ಲಿಂ. ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರ 36ನೇ ವಾರ್ಷಿಕ ಪುಣ್ಯಾರಾಧನೆ, ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರ 11ನೇ ವರ್ಷದ ಸ್ಮರಣೋತ್ಸವ ಹಾಗೂ ಪ್ರಸ್ತುತ ಜಗದ್ಗುರುಗಳ ದ್ವಾದಶ ಪೀಠಾರೋಹಣ ಮಹೋತ್ಸವದ ಅಂಗವಾಗಿ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು.



ಮೆರವಣಿಗೆಯಲ್ಲಿ ಗಜರಾಜ ರಾಜ ಗಾಂಭೀರ್ಯದಿಂದ ಹೆಜ್ಜೆ ಹಾಕುತ್ತಿದ್ದರೆ, ಮುತ್ತೈದೆಯರು ಪೂರ್ಣಕುಂಭ ಹೊತ್ತು ನಡೆದರು. ವಟುಗಳು ಸಾಂಪ್ರದಾಯಿಕ ಉಡುಗೆಯಲ್ಲಿದ್ದರು.

ನಂದಿಕೋಲು, ಸಮಾಳ ಮುಂತಾದ ಕಲಾ ತಂಡಗಳು ಮೆರವಣಿಗೆಯ ಕಳೆಯನ್ನು ಹೆಚ್ಚಿಸಿದವು. ಭಕ್ತರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಮಾಜಿ ಮೇಯರ್ ಬಿ.ಜಿ. ಅಜಯಕುಮಾರ್, ಮುಖಂಡರಾದ ಸಿದ್ದೇಶ್ ಕೋಟೆಹಾಳ್, ಮುರುಗೇಶ ಆರಾಧ್ಯ, ಎಸ್. ಜಿ. ಉಳುವಯ್ಯ, ಅಕ್ಕಿ ರಾಜು, ಎನ್.ಎಂ. ತಿಪ್ಪೇಸ್ವಾಮಿ, ಹನುಮಂತಪ್ಪ, ಶಿವಕುಮಾರ್ ಪಾಲ್ಗೊಂಡಿದ್ದರು.

ಇದಕ್ಕೂ ಮೊದಲು ಶಾಮನೂರು ಬೈಪಾಸ್‌ನಲ್ಲಿ ಜಗದ್ಗುರುಗಳ ಪುರ ಪ್ರವೇಶವಾಯಿತು. ಅಲ್ಲಿಂದ ಅವರನ್ನು ಬೈಕ್ ರ್‍ಯಾಲಿ ಮೂಲಕ ಕರೆ ತರಲಾಯಿತು. ನಂತರ ಶ್ರೀಶೈಲ ಮಠದ ದ್ವಾರ ಬಾಗಿಲ ಉದ್ಘಾಟನೆ ನೆರವೇರಿತು.

# ಬೆಂಗಳೂರಿನಲ್ಲಿ ಕರಗದ ಕಾರ್ಮೋಡ

ಬೆಂಗಳೂರು, ಸೆ. 7 – ಬೆಂಗಳೂರಿನ ಕೆಲ ಭಾಗಗಳಲ್ಲಿ ಬುಧವಾರವೂ ಪ್ರವಾಹ ಸ್ಥಿತಿ ಮುಂದುವರೆಯುತ್ತಿರುವ ಮಧ್ಯೆ ಹೇಳಿಕೆ ನೀಡಿರುವ ಹವಾಮಾನ ಇಲಾಖೆ, ಇನ್ನೂ ಕೆಲ ದಿನ ಬೆಂಗಳೂರಿಗೆ ಮಳೆ ಕಾಟದಿಂದ ಮುಕ್ತಿ ಇಲ್ಲ ಎಂದು ಹೇಳಿದೆ.

**ಇನ್ನೂ ಬರಲಿದೆ ಭಾರೀ ಮಳೆ ಎಂದ ಹವಾಮಾನ ಇಲಾಖೆ**

ಕರಾವಳಿ, ಬೆಂಗಳೂರು ಸೇರಿದಂತೆ ದಕ್ಷಿಣ ಒಳನಾಡಿನಲ್ಲಿ ಸೆಪ್ಟೆಂಬರ್ 8-9ರಂದು ಹಾಗೂ ಕರ್ನಾಟಕದ ಒಳನಾಡಿನಲ್ಲಿ ಸೆಪ್ಟೆಂಬರ್ 9-10ರಂದು ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರ್ನಾಟಕದ ಒಳನಾಡಿನಲ್ಲಿ ಮತ್ತು ಬಂಗಾಳ ಕೊಲ್ಲಿಯಲ್ಲಿ ಆಗುತ್ತಿರುವ ಹವಾಮಾನ ಬೆಳವಣಿಗೆಗಳಿಂದ ಬೆಂಗಳೂರು ಹಾಗೂ ರಾಜ್ಯದ ಇತರೆಡೆ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕಳೆದ ನಾಲ್ಕು ದಿನಗಳಲ್ಲಿ ಬೆಂಗಳೂರು ನಗರದಲ್ಲಿ 251.4 ಮಿ.ಮೀ. ಮಳೆಯಾಗಿದೆ. (5ನೇ ಪುಟಕ್ಕೆ)


# ಜಾಲತಾಣಗಳ ನಿಯಂತ್ರಣಕ್ಕೆ ಕೇಂದ್ರದ ಮಾರ್ಗಸೂಚಿ

ನವದೆಹಲಿ, ಸೆ. 7 – ಸಾಮಾಜಿಕ ಜಾಲತಾಣಗಳ ನಿಯಂತ್ರಣಕ್ಕಾಗಿ ಮಾರ್ಗಸೂಚಿ ರೂಪಿಸಲಾಗುವುದು ಎಂದು ಕೇಂದ್ರ ಸರ್ಕಾರ ದೆಹಲಿ ಹೈಕೋರ್ಟ್‌ಗೆ ತಿಳಿಸಿದೆ.

ಸರ್ಕಾರ ರೂಪಿಸಲು ಉದ್ದೇಶಿಸಿರುವ ಮಾರ್ಗಸೂಚಿಯಲ್ಲಿ ಜಾಲತಾಣಗಳ ಖಾತೆಗಳನ್ನು ರದ್ದುಗೊಳಿಸುವ ವಿಷಯವೂ ಸೇರಿರಲಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಟ್ವಿಟ್ಟರ್‌ನ ಹಲವು ಖಾತೆಗಳನ್ನು ರದ್ದುಗೊಳಿಸಿರುವುದಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ಹಲವು ಅರ್ಜಿಗಳನ್ನು ದಾಖಲಿಸಲಾಗಿತ್ತು. ಈ ಬಗ್ಗೆ ನ್ಯಾಯಮೂರ್ತಿ ಯಶವಂತ್ ವರ್ಮ ವಿಚಾರಣೆ ನಡೆಸುತ್ತಿದ್ದಾರೆ.

ನ್ಯಾಯಾಲಯದ ಎದುರು ಅರ್ಜಿ ದಾಖಲಿಸಿರುವ ಕೇಂದ್ರ ಸರ್ಕಾರ, ಮುಂದಿನ ಕಾಲಘಟ್ಟದಲ್ಲಿ ಖಾತೆಗಳ ರದ್ದುಗೊಳಿಸುವುದೂ ಸೇರಿದಂತೆ ಹಲವಾರು ವಿಷಯಗಳ ಬಗ್ಗೆ ಮಾರ್ಗಸೂಚಿಗಳನ್ನು ರೂಪಿಸಲಾಗುವುದು ಎಂದು ಹೇಳಿದೆ.

## ಪೂಜ್ಯ ಗುರುಗಳಿಗೆ ಭಕ್ತಿ ಸಮರ್ಪಣೆ




ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರು ಶ್ರೀ 1108 **ಲಿಂಗೈಕ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ 30ನೇ ಶ್ರದ್ಧಾಂಜಲಿ ಸಮಾರಂಭದ** ದಾಸೋಹಕ್ಕೆ ಹರಿಹರ ತಾಲ್ಲೂಕಿನಿಂದ ಭಕ್ತಿ ಸಮರ್ಪಣೆ, ಪ್ರತಿ ವರ್ಷದ ಪದ್ಧತಿಯಂತೆ ಈ ವರ್ಷವೂ ಸೆಪ್ಟೆಂಬರ್ 24 ರಂದು ಸಿರಿಗೆರೆಯಲ್ಲಿ ನಡೆಯಲಿರುವ ಲಿಂಗೈಕ್ಯ ಗುರುವರ್ಯರ ಶ್ರದ್ಧಾಂಜಲಿ ಸಮಾರಂಭದ ದಾಸೋಹಕ್ಕೆ ನಮ್ಮ ತಾಲ್ಲೂಕಿನಿಂದ ಭಕ್ತಿ ಸಮರ್ಪಣೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ತಾಲ್ಲೂಕಿನ ಸಮಸ್ತ ಭಕ್ತಾದಿಗಳು ತಮ್ಮ ಭಕ್ತಿ ಕಾಣಿಕೆ ಅರ್ಪಣೆ ಮಾಡಿ, ಲಿಂಗೈಕ್ಯ ಗುರುವರ್ಯರ ಕೃಪೆಗೆ ಪಾತ್ರರಾಗಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

**ಸ್ಥಳ : ಕೊಂಡಜ್ಜಿ, ಹರಿಹರ ತಾಲ್ಲೂಕು, ದಿನಾಂಕ : 9 ಸೆಪ್ಟೆಂಬರ್ 2022, ಶುಕ್ರವಾರ ಸಮಯ : ಬೆಳಿಗ್ಗೆ 11.00 ಗಂಟೆಗೆ**

**ತರಳಬಾಳು ಜಗದ್ಗುರು ಡಾ.ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರಿಗೆ ಭಕ್ತಿಪೂರ್ವಕ ಸ್ವಾಗತ**

**ಸಾಧು ವೀರಶೈವ ಸಮಾಜ, ಹರಿಹರ ತಾಲ್ಲೂಕು**

- ಹಲಸಬಾಳು ಶಿವಾನಂದಪ್ಪ, ಉಪಾಧ್ಯಕ್ಷರು, ಹರಿಹರ.
- ಇಟಗಿ ಶಿವಣ್ಣ, ಕಾರ್ಯದರ್ಶಿ, ನಿಟ್ಟೂರು.
- ಕೆ.ವಿ ರುದ್ರೇಶ್., ಸಹ ಕಾರ್ಯದರ್ಶಿ, ಬೆಳ್ಳೂಡಿ.
- ಬಿ. ಹಾಲೇಶಪ್ಪ, ಖಜಾಂಚಿ, ಮಲೇಬೆನ್ನೂರು.
- ಚೈತ್ರಾ ಕೋಂ. ಚಿದಾನಂದಪ್ಪ, ಸದಸ್ಯರು, ಮಲೇಬೆನ್ನೂರು.
- ವನಜಮ್ಮ ಕೋಂ. ಓಂಕಾರಪ್ಪ, ಸದಸ್ಯರು, ದಿಬ್ಬದಹಳ್ಳಿ.
- ಸುನಿತಮ್ಮ, ಸದಸ್ಯರು, ಶಿವನಳ್ಳಿ.
- ರತ್ನಮ್ಮ ಕೋಂ. ಚನ್ನಬಸಪ್ಪ, ಸದಸ್ಯರು, ಯಲವಟ್ಟಿ.
- ಚೇತನ ಕೋಂ. ಆನಂದ, ಸದಸ್ಯರು, ಹರಿಹರ.
- ಗೌಡ್ರ ಸಂಗಪ್ಪ, ಸದಸ್ಯರು, ಕೊಂಡಜ್ಜಿ.
- ಜಿ. ಮಂಜುನಾಥ ಪಟೇಲ್, ಸದಸ್ಯರು, ಕೊಮಾರನಳ್ಳಿ.
- ಎಸ್. ರವೀಂದ್ರನಾಥ್, ಸದಸ್ಯರು, ಹರಳಹಳ್ಳಿ.
- ಹೆಚ್.ಕೆ. ಬಸವರಾಜ, ಸದಸ್ಯರು, ಹಲಸಬಾಳು.
- ಮರುಳಪ್ಪ, ಸದಸ್ಯರು, ಕುಣೆಬೆಳಕೆರೆ.
- ಹೆಚ್.ನಾಗರಾಜ, ಸದಸ್ಯರು, ಅಮರಾವತಿ.
- ಬೂದಿಹಾಳ್ ಹಾಲೇಶಪ್ಪ, ಸದಸ್ಯರು, ಹೊಳೆಸಿರಿಗೆರೆ.
- ಡಿ. ಹೇಮಂತರಾಜು, ಸದಸ್ಯರು, ಹರಿಹರ.
- ಹುಗ್ಗಿ ರೇವಣಸಿದ್ದಪ್ಪ, ಸದಸ್ಯರು, ಕಡರನಾಯಕನಹಳ್ಳಿ.
- ಹಳೆಮನಿ ಶಂಭುಲಿಂಗಪ್ಪ, ಸದಸ್ಯರು, ಕುಂಬಳೂರು.
- ಎಸ್.ಜಿ. ಪ್ರಭುದೇವ, ಸದಸ್ಯರು, ನಿಟ್ಟೂರು.



**ಅಮರಾವತಿ ಮಹದೇವಪ್ಪ ಗೌಡ್ರು**
**ಅಧ್ಯಕ್ಷರು, ಹರಿಹರ.**

ಮತ್ತು ಹರಿಹರ ತಾಲ್ಲೂಕಿನ ಸಮಾಜದ ಸಮಸ್ತ ಬಾಂಧವರು


## ಗತಿ ಶಕ್ತಿಗಾಗಿ ರೈಲ್ವೆ ಜಮೀನುಗಳ ದೀರ್ಘಾವಧಿ ಗುತ್ತಿಗೆ

ನವದೆಹಲಿ, ಸೆ. 7 – ಪಿಎಂ ಗತಿ ಶಕ್ತಿ ಯೋಜನೆಗಾಗಿ ರೈಲ್ವೆ ಜಾಗಗಳನ್ನು ದೀರ್ಘಾವಧಿಗೆ ಗುತ್ತಿಗೆ ನೀಡುವ ಯೋಜನೆಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ಇದರಿಂದಾಗಿ 300 ಕಾರ್ಗೋ ಟರ್ಮಿನಲ್‌ಗಳ ಸ್ಥಾಪನೆಗೆ ಮತ್ತು 1.25 ಲಕ್ಷ ಉದ್ಯೋಗ ಸೃಷ್ಟಿಗೆ ನೆರವಾಗುವ ನಿರೀಕ್ಷೆ ಇದೆ.

ಪ್ರಸಕ್ತ 5 ವರ್ಷಗಳ ಅವಧಿಗೆ ಜಮೀನು ಗುತ್ತಿಗೆ ನೀಡಲಾಗುತ್ತಿದೆ. ನೂತನ ನೀತಿಯ ಅನ್ವಯ 35 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗುವುದು ಎಂದು ಸಂಪುಟ ಸಭೆಯ ನಂತರ ಕೇಂದ್ರ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ.

ನೂತನ ನೀತಿ ಅನ್ವಯ ಗುತ್ತಿಗೆ ಶುಲ್ಕವನ್ನು ಈಗಿರುವ ಶೇ.6ರಿಂದ ಶೇ.1.5ಕ್ಕೆ ಇಳಿಸಲಾಗಿದೆ. ಈ ಬದಲಾವಣೆಗಳಿಂದ ಭಾರತೀಯ ಕಂಟೈನರ್ ನಿಗಮದ ಖಾಸಗೀಕರಣವೂ ಆಗಲಿದೆ. ಇದರಿಂದ ರೈಲ್ವೆಗೆ ನೀಡುವ ಬಾಡಿಗೆ ಕಡಿಮೆಯಾಗಲಿದೆ. ಹೂಡಿಕೆ ಆಕರ್ಷಿಸುವ ಸಲುವಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

## ಕಡತಿ ಚನ್ನಬಸಪ್ಪ ನಿಧನ



ಗಾಂಧಿನಗರ 1ನೇ ಕ್ರಾಸ್ ವಾಸಿ, ದಾವಣಗೆರೆ ಜಿಲ್ಲಾ ಜೆಡಿಎಸ್ ಎಸ್ಸಿ ವಿಭಾಗದ **ಜಿಲ್ಲಾಧ್ಯಕ್ಷರಾದ ಶ್ರೀ ಸಿ.ಅಂಜಿನಪ್ಪ ಕಡತಿ** ಇವರ ತಂದೆಯವರಾದ

**ಶ್ರೀ ಕಡತಿ ಚನ್ನಬಸಪ್ಪ**

ಅವರು ದಿನಾಂಕ 7.9.2022ರ ಬುಧವಾರ ರಾತ್ರಿ 11.50ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 92 ವರ್ಷ ವಯಸ್ಸಾಗಿತ್ತು. ಪತ್ನಿ, ಪುತ್ರರಾದ **ಕಡತಿ ಅಂಜಿನಪ್ಪ,** ನಗರ ಪಾಲಿಕೆ ದಫೇದಾರ್ **ಕೆ.ಸಿ. ಕಾಂತರಾಜ್** 'ಶರಣ ಕ್ರಾಂತಿ' ಸಂಪಾದಕ **ಕೆ.ಸಿ. ಮಂಜುನಾಥ್,** ಐವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 8.9.2022ರ ಗುರುವಾರ ಮಧ್ಯಾಹ್ನ 3 ಗಂಟೆಗೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ :**

**ಪತ್ನಿ, ಮಕ್ಕಳು, ಮೊಮ್ಮಕ್ಕಳು. ಮೊ : 96321 65557**


SUNSHINE PURANTAR HOSPITAL

Rainbow Children's Hospital | BirthRight BY RAINBOW HOSPITALS Your Right to a Safe Delivery

**ಮಕ್ಕಳಿಗಾಗಿ ವಿಶೇಷ ಆರೈಕೆ ಏಕೆಂದರೆ ಪ್ರತಿ ಮಗುವೂ ವಿಶೇಷವಾಗಿದೆ.**

**ಭಾರತದ ನಂಬರ್1 ಮಕ್ಕಳ ಆಸ್ಪತ್ರೆಯ ನೆಟ್ವರ್ಕ್**

ರೈನ್ಬೋ ಚಿಲ್ಡ್ರನ್ಸ್ ಆಸ್ಪತ್ರೆ, ಬೆಂಗಳೂರು
ಸಹಯೋಗದೊಂದಿಗೆ
ಸನ್ಶೈನ್ ಪುರಂತರ ಆಸ್ಪತ್ರೆ

ದಾವಣಗೆರೆಯಲ್ಲಿ ಮಕ್ಕಳಿಗಾಗಿ ಪರಿಣಿತ ಆರೈಕೆಯ ಸೇವೆಯನ್ನು ತರುತ್ತದೆ, ಆದ್ದರಿಂದ ನಿಮ್ಮ ಮಗುವಿಗೆ ಮನೆಯ ಸಮೀಪದಲ್ಲಿ ಗುಣಮಟ್ಟದ ಆರೈಕೆಯ ಸೇವೆಯನ್ನು ಪಡೆಯಬಹುದು.



- ಮಕ್ಕಳ ನರವಿಜ್ಞಾನ
- ಮಕ್ಕಳ ಸಂಧಿವಾತಶಾಸ್ತ್ರ
- ಮಕ್ಕಳ ರಕ್ತವಿಜ್ಞಾನ
- ಮಕ್ಕಳ ಮೂಳೆಶಾಸ್ತ್ರ

ತಿಂಗಳ ಪ್ರತಿ 2 ನೇ ಶುಕ್ರವಾರದಂದು ಸಮಾಲೋಚನೆ ಲಭ್ಯವಿದೆ

ಅಪಾಯಿಂಟ್ಮೆಂಟ್ ನ್ನು ಬುಕ್ ಮಾಡಲು ಇದಕ್ಕೆ ಕರೆ ಮಾಡಿರಿ
94489 55667 | 88846 34545
88844 36021

T&C apply

Rainbow Children's Hospital - Marathahalli
Marathahalli-KR Puram Outer Ring Rd, Doddanekundi, Marathahalli, Bengaluru - 560037.
www.rainbowhospitals.in



## ಕರ್ನಾಟಕ ಗ್ರಾಮೀಣ ಬ್ಯಾಂಕ್

(ಭಾರತ ಸರ್ಕಾರದಿಂದ ಸ್ಥಾಪಿತ ಷೆಡ್ಯೂಲ್ಡ್ ಬ್ಯಾಂಕ್ – ಪ್ರವರ್ತಕರು : ಕೆನರಾ ಬ್ಯಾಂಕ್)

Azadi Ka Amrit Mahotsav

ಪ್ರಧಾನ ಕಛೇರಿ : ಬಳ್ಳಾರಿ | ರಿಟೇಲ್ ಸಾಲಗಳ ವಿಭಾಗ | ಪ್ರಾದೇಶಿಕ ಕಛೇರಿ : ದಾವಣಗೆರೆ

ಶಾಖೆ : ರೈತರ ಬೀದಿ ಹತ್ತಿರ, ಎ.ವಿ.ಕೆ. ಕಾಲೇಜು ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ. ಮೊ : 90086 71165, 99003 52564.

ಗ್ರಾಹಕರಿಗೆ ಹಬ್ಬದ ಉಡುಗೊರೆಯಾಗಿ ರಿಟೇಲ್ ಸಾಲಗಳಲ್ಲಿ ಆಕರ್ಷಕ ಬಡ್ಡಿದರ ಹಾಗೂ ಪರಿಷ್ಕರಣ ಶುಲ್ಕದಲ್ಲಿ ಭಾರೀ ರಿಯಾಯಿತಿಯೊಂದಿಗೆ ಸಾಲ ಸೌಲಭ್ಯ

ದಿನಾಂಕ: 16-08-2022 ರಿಂದ 30-09-2022 ರವರೆಗೆ ರಿಟೇಲ್ ಸಾಲಗಳ ಹಬ್ಬ



- ಗೃಹಸಾಲ ಬಡ್ಡಿದರ ಶೇ 7.85%* — EMI — ರೂ. 1 ಲಕ್ಷಕ್ಕೆ ರೂ. 724/- 30 ವರ್ಷಗಳ ಅವಧಿಗೆ
- ಬಡ್ಡಿದರ ಶೇ 10.90%* — EMI — ರೂ. 1 ಲಕ್ಷಕ್ಕೆ ರೂ. 1372/- 10 ವರ್ಷಗಳ ಅವಧಿಗೆ
- ಕೆ.ಜಿ.ಬಿ. ಹೋಂ ಕ್ಯಾಶ್ ಬಡ್ಡಿದರ ಶೇ 8.75%* 10 ವರ್ಷಗಳ ಅವಧಿಗೆ EMI ರೂ 1 ಲಕ್ಷಕ್ಕೆ 1254/-
- ಗೃಹಸಾಲ ವರ್ಗಾವಣೆ (Takeover) ಬಡ್ಡಿದರ ಶೇ 7.75%* — EMI — ರೂ. 1 ಲಕ್ಷಕ್ಕೆ ರೂ. 716/- 30 ವರ್ಷಗಳ ಅವಧಿಗೆ

- ಮನೆ ಕಟ್ಟಲು ಸಾಲ
- ಮನೆ ರಿಪೇರಿ ಸಾಲ
- ಮನೆ ಸಾಲ ವರ್ಗಾವಣೆ (ಇತರೆ ಹಣಕಾಸು ಸಂಸ್ಥೆಗಳಿಂದ)
- ಮನೆ ಖರೀದಿ ಸಾಲ
- ಟಾಪ್ ಅಪ್ ಸಾಲ
- ಮನೆ/ಕಟ್ಟಡ ಅಡಮಾನ ಸಾಲ
- ಖಾಲಿ ನಿವೇಶನ ಖರೀದಿ ಸಾಲ*



ವಾಹನ ಸಾಲ ಬಡ್ಡಿದರ ಶೇ 8.15%*

ರಿಟೇಲ್ ಹಬ್ಬದ ಪ್ರಯುಕ್ತ 50% ಪರಿಷ್ಕರಣ ಶುಲ್ಕದಲ್ಲಿ ರಿಯಾಯಿತಿ

ಸರ್ಕಾರಿ ನೌಕರರು, ವೇತನದಾರರು, ಆದಾಯ ತೆರಿಗೆ ಸಲ್ಲಿಸುತ್ತಿರುವವರು ಈ ಸೌಲಭ್ಯ ಪಡೆಯಲು ಶಾಖಾ ವ್ಯವಸ್ಥಾಪಕರನ್ನು ಸಂಪರ್ಕಿಸಲು ಕೋರಿದೆ.

*ಆಕರ್ಷಕ ಬಡ್ಡಿದರಗಳು ಸಿಬಿಲ್ (CIBIL) ಅಂಕಗಳ ಮೇಲೆ ಅವಲಂಬಿತವಾಗಿರುತ್ತದೆ. *ಬ್ಯಾಂಕಿನ ಷರತ್ತು ಮತ್ತು ನಿಬಂಧನೆಗಳಿಗೆ ಅನುಗುಣವಾಗಿ


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte